ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2019

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-19 ಸಂಚಿಕೆ-4 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾಮಹೋತ್ಸವ






ತಾ.14–03–3019ರ ಗುರುವಾರ ಮೀನಸಂಕ್ರಮಣದಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾದೇವಸ್ಥಾನದಲ್ಲಿ ಪ್ರತಿಷ್ಠಾಮಹೋತ್ಸವ ನಡೆಯಿತು. ಇದು ಶ್ರೀ ಶಾರದೆಯು ಶೃಂಗೇರಿಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳಗಳವರ ದಿವ್ಯಹಸ್ತಗಳಿಂದ ಪ್ರತಿಷ್ಠಾಪಿಸಲ್ಪಟ್ಟ ದಿನ. ಅಂದು ಬೆಳಿಗ್ಗೆ ಎಂಟು ಗಂಟೆಗೆ ಶ್ರೀ ಶಾರದಾ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರ ನೇತೃತ್ವದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ , ಕಾರ್ಯದರ್ಶಿ ಶ್ರೀ ಯು ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಬಿ ಜಯರಾಮ ರಾವ್, ಉಪಾಧ್ಯಕ್ಷರಾದ ಶ್ರೀ ಬಿ ಕೃಷ್ಣಮೂರ್ತಿರಾವ್, ಮಹಿಳಾವೇದಿಕೆಯ ಶ್ರೀಮತಿ ಉಷಾ ಶ್ಯಾನುಭಾಗ್, ಶ್ರೀಮತಿ ಜಯಲಕ್ಷ್ಮೀ ಮುರಳೀಧರ್ ರಾವ್, ಶ್ರೀಮತಿ ಉಷಾ ಮೋಹನದೇವ ಇತ್ಯಾದಿ ಸಮಾಜಬಾಂಧವರು ಶ್ರೀ ದೇವಿಯ ಸಮ್ಮುಖದಲ್ಲಿಪ್ರಾರ್ಥಿಸಿ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ನಂತರ ಸ್ವಾಧ್ಯಾಯ ಸಮಿತಿಯವರಿಂದ ರುದ್ರ ಹಾಗೂ ಪುರುಷಸೂಕ್ತ ಪಾರಾಯಣ, ಮಹಿಳಾವೇದಿಕೆಯವರಿಂದ ಶ್ರೀ ಸೂಕ್ತ, ದೇವಿ ಸೂಕ್ತ, ಲಲಿತಾ ಸಹಸ್ರನಾಮ, ಸೌಂದರ್ಯಲಹರಿ, ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಪಾರಾಯಣ ಹಾಗೂ ಭಜನಾ ಕಾರ್ಯಕ್ರಮ ನೆರವೇರಿತು. ದೇವಿಗೆ ಶ್ರೀ ಜಗದೀಶ ಉಪಾಧ್ಯಾಯರು ಇತರ ಋತ್ವಿಜರೊಂದಿಗೆ ಪಂಚಾಮೃತಾಭಿಷೇಕ, ಗಣಹೋಮ ಇತ್ಯಾದಿಗಳನ್ನು ವಿಧಿವತ್ತಾಗಿ ನೆರವೇರಿಸಿ ಸಮರ್ಪಿಸಿದರು. ನೆರೆದ ನೂರಾರು ಭಕ್ತರ ಸಮ್ಮುಖದಲ್ಲಿ ಮಧ್ಯಾಹ್ನ ಹನ್ನೆರಡು ಗಂಟೆಗೆ ಮಂಗಳಾರತಿ ಮಹಾಪೂಜೆಯನ್ನು ನೆರವೇರಿಸಲಾಯಿತು. ಶ್ರೀಯುತ ವೈ.ಮುರಳೀಧರ ರಾವ್ ದಂಪತಿಗಳು ಪೂಜಾಕರ್ತೃವಾಗಿ ಧಾರ್ಮಿಕ ಕಾರ್ಯಕ್ರಮಗಳನ್ನು ಸಂಘದ ಪರವಾಗಿ ಪ್ರತಿನಿಧಿಸಿದರು. ದೇವಿಯನ್ನು ಬೆಳ್ಳಿಯ ಸಿಂಹಾಸನ, ಪ್ರಭಾವಳಿ ಹಾಗೂ ಕಿರೀಟದೊಂದಿಗೆ ಚಿನ್ನ ಹಾಗೂ ವಜ್ರದ ಆಭರಣಗಳಿಂದ ಅಲಂಕರಿಸಲಾಗಿತ್ತು. ಮಹಾಪೂಜೆಯ ನಂತರ ಭೋಜನ ಪ್ರಸಾದವನ್ನು ಏರ್ಪಾಟು ಮಾಡಲಾಗಿತ್ತು. ಸುಮಾರು ಇನ್ನೂರೈವತ್ತು ಮಂದಿ ಸಮಾಜ ಬಾಂಧವರು ಹಾಗೂ ಪರಿಸರದ ಭಕ್ತರು ಪಾಲ್ಗೊಂಡು ಶ್ರೀ ದೇವಿಯ ಕೃಪೆಗೆ ಪಾತ್ರರಾದರು.

ಪ್ರತಿಷ್ಠಾಮಹೋತ್ಸವದ ಹಿಂದಿನ ದಿನ ರಾತ್ರಿ ದೇವಳಕ್ಕೆ ನೂತನವಾಗಿ ಹಾಕಲಾದ ಚಾವಣಿಯನ್ನು ಸಮರ್ಪಿಸುವ ಕಾರ್ಯಕ್ರಮವು ವಿಧಿವತ್ತಾಗಿ ನೆರವೇರಿತು. ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರ ನೇತೃತ್ವದಲ್ಲಿ ವಾಸ್ತುಹೋಮ ಹಾಗೂ ಗಣ ಹೋಮ ನೆರವೇರಿಸಲಾಯಿತು. ಅಂದು ಶ್ರೀ ದಿವಾಕರ ರಾವ್ ದಂಪತಿಗಳು ಕರ್ತೃಗಳಾಗಿ ಸಹಕರಿಸಿದರು. ಆ ಪ್ರಯುಕ್ತ ರಾತ್ರಿ ಪ್ರಸಾದ ಭೋಜನವನ್ನು ಏರ್ಪಡಿಸ ಲಾಗಿತ್ತು ಅದೇ ದಿನ ಶ್ರೀ ಶಾರದಾ ಪತ್ರಿಕೆ ಯನ್ನು ಅಂಚೆಗೆ ರವಾನಿಸುವ ಕೆಲಸವೂ ಕಾರ್ಯಕರ್ತರ ಸಹಕಾರದಿಂದ ನೆರವೇರಿತು.

**ಪ್ರತಿಷ್ಠಾ ಮಹೋತ್ಸವವು ಸಾಂಗವಾಗಿ ನೆರವೇರಲು ಸಹಕರಿಸಿದ ಸಂಘದ ಪದಾಧಿಕಾರಿಗಳಿಗೆ, ಸಮಾಜ ಬಾಂಧವರಿಗೆ, ಪರಿಸರದ ಭಕ್ತರಿಗೆ, ಋತ್ವಿಜರಿಗೆ, ಸೇವಾ ಕರ್ತೃಗಳಿಗೆ ಸಂಘವು ಕೃತಜ್ಞತೆಗಳನ್ನು ಅರ್ಪಿಸುತ್ತದೆ.**

## ಕಿರು ನವರಾತ್ರಿ ಉತ್ಸವ ಆರಂಭ



ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು ಉಡುಪಿ ಇಲ್ಲಿ ತಾ.06-04-2019ರಿಂದ 9 ದಿನಗಳ ಕಿರುನವರಾತ್ರಿ ಉತ್ಸವವು ಆರಂಭವಾಯಿತು. ಪ್ರತಿ ದಿನವೂ ದೇವಸ್ಥಾನದಲ್ಲಿ ವಿಶೇಷ ಅಲಂಕಾರ, ಭಜನೆ, ಪಾರಾಯಣ ಹಾಗೂ ವಿಶೇಷ ಪೂಜೆಗಳು ನೆರವೇರಿದವು. ತಾ.13-04-2019ರ ರಾಮನವಮಿಯಂದು ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ನೆರವೇರಿತು. ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ ಹಾಗೂ ಇತರ ಋತ್ವಿಜರ ನೇತೃತ್ವದಲ್ಲಿ ಧಾರ್ಮಿಕ ವಿಧಿಗಳು ನೆರವೇರಿದವು. ಸಂಘದ ಪದಾಧಿಕಾರಿಗಳು ಹಾಗೂ ಸಮಾಜ ಬಾಂಧವರು ಸಕ್ರಿಯವಾಗಿ ಭಾಗವಹಿಸಿದರು.

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ-2.



ಪ್ರಿಯರೇ,

ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ

**ಶ್ರೀ ಶಂಕರ ಜಯಂತಿ ಆಚರಣೆಯು**


ತಾ.09-05-2019ನೇ ಗುರುವಾರ ನೆರವೇರಲಿದೆ.

ಆ ಪ್ರಯುಕ್ತ ಅದೇ ದಿನ ಬೆಳಿಗ್ಗೆ **ಸಾಮೂಹಿಕ ಉಪನಯನ**ವು ನಡೆಯಲಿದೆ.

ಸರ್ವರಿಗೂ ಆದರದ ಸ್ವಾಗತ :

– ಆಡಳಿತ ಮಂಡಳಿ

**ಕಾರ್ಯಕ್ರಮಗಳ ವಿವರ :** ಬೆಳಿಗ್ಗೆ 8-00 ಗಂಟೆಗೆ ಪ್ರಾರ್ಥನೆ, ರುದ್ರಾಭಿಷೇಕ, ಪಾರಾಯಣ, ಉಪನಯನ, ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ ಹಾಗೂ ಪೂಜೆ, ಬೆಳಿಗ್ಗೆ 11 ಗಂಟೆಗೆ ಉಪನ್ಯಾಸ ಕಾರ್ಯಕ್ರಮ ಮತ್ತು ಮಧ್ಯಾಹ್ನ 12-30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ. ಈ ಶುಭ ದಿನದಂದು ತಮ್ಮ ವಟುಗಳಿಗೆ ಉಪನಯನ ಸಂಸ್ಕಾರ ನಡೆಸುವರೇ ನೋಂದಾಯಿಸಲು ತಾ.30-04-2019 ಕೊನೆಯ ದಿನವಾಗಿರುತ್ತದೆ. ಆಸಕ್ತರು ಸಂಘದ ಕಛೇರಿಯನ್ನು 0820-2520754ನಲ್ಲಿ ಸಂಪರ್ಕಿಸಬೇಕಾಗಿ ಕೋರುತ್ತೇವೆ.



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಚುನಾವಣಾ ಸಮಯವಾದುದರಿಂದ ಚುನಾವಣೆಯ ಕಡೆಗೆ ಚರ್ಚೆ ಬೇಡವೆಂದರೂ ಹೊರಳುತ್ತದೆ. ಒಳ್ಳೆಯ ಪಕ್ಷ ಯಾವುದು?, ಒಳ್ಳೆಯ ಪ್ರಧಾನಿ ಯಾರು?, ತಮ್ಮ ಕ್ಷೇತ್ರದಲ್ಲಿ ಯಾರು ಗೆಲ್ಲುವ ಅಭ್ಯರ್ಥಿ? ಇದೇ ಎಲ್ಲರದ್ದೂ ಚರ್ಚೆ. ಕೆಲವೊಮ್ಮೆ ಪಕ್ಷ ಒಳ್ಳೆಯದಿದ್ದರೆ ಅಭ್ಯರ್ಥಿ ಸರಿಯಿಲ್ಲ. ಇನ್ನು ಕೆಲವೊಮ್ಮೆ ಅಭ್ಯರ್ಥಿ ಮತ್ತು ಪಕ್ಷ ಸರಿಯಿಲ್ಲ ಆದರೆ ಪ್ರಧಾನಿ ಬೇಕಾದವ, ಮಗದೊಮ್ಮೆ ಅಭ್ಯರ್ಥಿ ಉತ್ತಮ ಆದರೆ ಪಕ್ಷ ಸರಿಯಿಲ್ಲ. ಎಲ್ಲಕ್ಕೂ ಮಿಗಿಲಾಗಿ ದುಃಖವಾಗುವುದು ಆಶ್ವಾಸನೆಗಳನ್ನು ನಂಬಿಸಿ ಮತಗಿಟ್ಟಿಸಿ ಕೊಂಡವನು ನಿರಾಸೆ ಮೂಡಿಸಿದಾಗ. ಹಾಗಾಗಿ ಇದ್ದದ್ದರಲ್ಲಿ ಒಳ್ಳೆಯದನ್ನು ಆಯ್ಕೆ ಮಾಡುವ ಪಜೀತಿ ನಮ್ಮದು.

ಮತ ನೀಡುವಾಗ ದೇಶದ ಹಿತವನ್ನು ಗಮನದಲ್ಲಿಟ್ಟು ಮತ ನೀಡಿ ಎನ್ನುತ್ತಾರೆ. ಆಮಿಷಗಳಿಗೆ ಬಲಿಯಾಗಿ ಮತವನ್ನು ಒತ್ತೆಬೇಡಿ ಎನ್ನುತ್ತಾರೆ. ಜಾತಿ ಮತದ ಕುರುಡು ಮೋಹವನ್ನು ಬಿಡಿ ಎನ್ನುತ್ತಾರೆ. ಆದರೆ ರಾಜಕೀಯ ಪಕ್ಷಗಳು ಈ ಎಲ್ಲಾ ಉಪದೇಶಗಳು ಮತದಾರನಿಗೆ ಮಾತ್ರ ಸೀಮಿತ ಎಂದು ಅಂದುಕೊಂಡಂತಿದೆ. ಅಭ್ಯರ್ಥಿಯನ್ನು ನಿಲ್ಲಿಸುವಾಗ ಜಾತಿ ಲೆಕ್ಕಾಚಾರ, ಬೆಂಬಲ ಕ್ರೋಢೀಕರಣಕ್ಕೆ ಹಣದ ಚೆಲ್ಲಾಟ, ಕೊನೆಗೆ ತಮ್ಮ ಮತದ ಬೆಲೆ ಅರಿಯದ ಮುಗ್ಧ ಮತದಾರರನ್ನು ಹುಡುಕಾಡಿ ಅವರಿಗೆ ಆಮಿಷಗಳ ಸುರಿಮಳೆ... ಇವೆಲ್ಲವೂ ಪಕ್ಷಗಳು ಹಾಗೂ ರಾಜಕೀಯ ನಾಯಕರು ಅನುಸರಿಸುತ್ತಿರುವ ನೀತಿ.

ಒಳ್ಳೆಯವರು, ಅದರಲ್ಲೂ ಯುವಕರು ರಾಜಕೀಯಕ್ಕೆ ಬರಬೇಕು ಎನ್ನುತ್ತಾರೆ. ಆದರೆ ರಾಜಕೀಯವನ್ನು ವೃತ್ತಿಯಾಗಿ ಸ್ವೀಕರಿಸಲು ಹಲವಾರು ಅಡೆತಡೆಗಳಿವೆ. ಮೊದಲನೆಯದಾಗಿ ರಾಜಕೀಯದಲ್ಲಿ ಬೆಲೆಯಿರುವುದು ಜನಪ್ರಿಯತೆಗೆ. ಇಲ್ಲಿ ಪ್ರಾಮಾಣಿಕತೆಗೆ, ಅರ್ಹತೆಗೆ, ಕ್ಷಮತೆಗೆ, ಜ್ಞಾನಕ್ಕೆ , ಅನುಭವಕ್ಕೆ ಎರಡನೆಯ ಸ್ಥಾನ. ಕಹಿಮದ್ದು ರುಚಿಸುವುದಿಲ್ಲ ಎಂಬಂತೆ ಜನಪ್ರಿಯತೆ ಎಂದೂ ಮೇಲಿನ ಗುಣಗಳಿಗೆ ಸಿದ್ಧಿಸದು. ಹಾಗಾಗಿ ರಾಜಕಾರಿಣಿಗಳು ಜನಪ್ರಿಯತೆಯನ್ನು ಗಳಿಸಲಿಕ್ಕಾಗಿ ಅಡ್ಡಮಾರ್ಗಗಳನ್ನು ಅನುಸರಿಸುತ್ತಾರೆ. ಅಷ್ಟುಮಾತ್ರವಲ್ಲ ವಿರೋಧಿಗಳ ಜನಪ್ರಿಯತೆಯನ್ನು ಕಡಿಮೆಮಾಡಲು ಅವಹೇಳನ, ಚಾರಿತ್ರ್ಯಹನನ, ಕಪೋಲಕಲ್ಪಿತ ಆರೋಪ, ಅಪಪ್ರಚಾರ, ಬೆದರಿಕೆಗಳಂತಹಾ ವಾಮಮಾರ್ಗವನ್ನೂ ಅನುಸರಿಸುತ್ತಾರೆ. ಆದುದರಿಂದ ರಾಜಕೀಯದಲ್ಲಿ ದೊರಕಿದ ಹುದ್ದೆಗಳಿಗೆ ಸ್ಥಿರತೆ ಇಲ್ಲ. ಹಂತಹಂತವಾಗಿ ಉನ್ನತ ಸ್ಥಾನಕ್ಕೆ ಏರುವ ಭರವಸೆ ಇಲ್ಲ. ಪ್ರಾಮಾಣಿಕವಾದ ಸಂಪಾದನೆ ಶೂನ್ಯ. ಮೇಲಾಗಿ ಅಪಪ್ರಚಾರಕ್ಕೆ ಒಳಗಾಗುವ ಭೀತಿ. ಹೀಗಾಗಿ ವಿದ್ಯಾರ್ಥಿ ಹಂತದಲ್ಲಿ ತಾನು ವೈದ್ಯನಾಗಬೇಕು, ಇಂಜಿನಿಯರಾಗಬೇಕು, ವಿಜ್ಞಾನಿಯಾಗಬೇಕು, ಉದ್ಯಮಿಯಾಗಬೇಕು ಎಂದು ಗುರಿಯಿಟ್ಟು ಪ್ರಯತ್ನಿಸುವವರಂತೆ ರಾಜಕಾರಿಣಿಯಾಗಬೇಕು ಎಂದು ಯೋಚಿಸುವವರಿಲ್ಲ. ರಾಜಕೀಯವೆನ್ನುವುದು ಅದು ಅನಿವಾರ್ಯವಾಗಿರುವವರಿಗೆ ಸೀಮಿತವಾಗಿಬಿಟ್ಟಿದೆ. ಇದು ರಾಜಕೀಯ ಕ್ಷೇತ್ರದ ಬೆಳವಣಿಗೆಗೆ ಮಾರಕವಾಗಿದೆ. ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿಯ ಸ್ಥಾನವನ್ನಲಂಕರಿಸಲೂ ಸಹಾ ಯಾವುದೇ ಅರ್ಹತಾ ಮಾನದಂಡವಿರದಿರುವುದೇ ರಾಜಕೀಯ ಕ್ಷೇತ್ರದ ಅಧೋಗತಿಗೆ ಕಾರಣ. ಇದು ದೇಶದ ಅಭಿವೃದ್ಧಿಯ ಮೇಲೂ ಪರಿಣಾಮ ಬೀರುತ್ತಿದೆ. ನಿಜವಾಗಿಯಾದರೆ ಚುನಾವಣೆಯಲ್ಲಿ ನಮಗೆ ಒಳ್ಳೆಯವರು ಮತ್ತು ಕೆಟ್ಟವರ ನಡುವಿನ ಆಯ್ಕೆಯ ಬದಲು ಇಬ್ಬರು ಒಳ್ಳೆಯವರ ನಡುವೆ ಹೆಚ್ಚು ಸಮರ್ಥನನ್ನು ಆರಿಸುವ ಪರಿಸ್ಥಿತಿ ಇರಬೇಕಿತ್ತಲ್ಲವೇ?

ಆದುದರಿಂದ ರಾಜಕೀಯಕ್ಕೂ ಅರ್ಹತಾ ಮಾನದಂಡ ವಿಧಿಸಬೇಕೆಂಬ ಭಾವನೆ ಜನರಲ್ಲಿ ಸಾರ್ವತ್ರಿಕವಾಗುತ್ತಿದೆ. ಈ ಕೂಗು ಬಲವಾದಂತೆ ಅದು ನಿಜವಾಗುವ ಕಾಲವೂ ಬರಬಹುದು.ಈ ಮಾನದಂಡಗಳಲ್ಲಿ ಕನಿಷ್ಟ ವಿದ್ಯಾರ್ಹತೆಯೂ ಒಂದು. ಆದರೆ ಡಾಕ್ಟರೇಟು ಡಿಗ್ರಿಗಳು ಸಹಾ ಮಾರಾಟಕ್ಕಿರುವ ಈ ದೇಶದಲ್ಲಿ ಡಿಗ್ರಿಯನ್ನು ಹೊಂದಿರುವುದು ಅರ್ಹತೆಗೆ ಪ್ರಮಾಣಪತ್ರವಾಗಲಾರದು.

ಆದುದರಿಂದ ಈಗ ಐ.ಎ.ಎಸ್ ಹುದ್ದೆಗಳಿಗೆ ಪರೀಕ್ಷೆ ನಡೆಸುವಂತೆ ಅಥವಾ ಮೆಡಿಕಲ್ ಪ್ರವೇಶಕ್ಕೆ ನೀಟ್ ಪರೀಕ್ಷೆ ನಡೆಸುವಂತೆ ರಾಜಕಾರಿಣಿಗಳಾಗಬಯಸುವವರಿಗೆ ಇಂಡಿಯನ್ ಪೊಲಿಟಿಕಲ್ ಸರ್ವೀಸ್ ಎಂಬ ಸ್ಪರ್ಧಾತ್ಮಕ ಪರೀಕ್ಷೆಯನ್ನು ಆರಂಭಿಸಬೇಕು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗಷ್ಟೇ ಚುನಾವಣೆಯಲ್ಲಿ ಭಾಗವಹಿಸಲು ಅನುಮತಿ ನೀಡಬೇಕು. ಅವರು ಗಳಿಸಿದ ರ್‍ಯಾಂಕ್‌ನಿಂದ ಅವರು ಲೋಕಸಭೆ, ರಾಜ್ಯಸಭೆ ವಿಧಾನಸಭೆ ಹಾಗೂ ಪಂಚಾಯತ್ ಚುನಾವಣೆಗಳಲ್ಲಿ ಯಾವ ಚುನಾವಣೆಗೆ ಸ್ಪರ್ಧಿಸಲು ಅರ್ಹರು ಎಂಬುದನ್ನು ನಿರ್ಧರಿಸುವಂತಾಗಬೇಕು. ಉನ್ನತ ಸ್ಥಾನಕ್ಕೆ ಸ್ಪರ್ಧಿಸಬಯಸುವವರು ಪುನಃ ಪರೀಕ್ಷೆಗೆ ಕುಳಿತು ಹೆಚ್ಚಿನ ಅಂಕ ಗಳಿಸಿದಲ್ಲಿ ಮಾತ್ರ ಅನುಮತಿ ಸಿಗುವಂತಾಗಬೇಕು.

ಇದೊಂದು ನನ್ನ ಸಲಹೆ ಮಾತ್ರ. ಚಿಂತನ ಮಂಥನದಿಂದ ಇನ್ನಷ್ಟು ಉತ್ತಮ ಸಲಹೆಗಳು ಹೊರಬಹುದು. ಏನೇ ಆಗಲಿ ರಾಜಕೀಯ ಹುದ್ದೆಗಳನ್ನು ಅಲಂಕರಿಸುವವರಿಗೆ ಅರ್ಹತಾ ಮಾನದಂಡ ವಿಧಿಸುವುದು ಅಗತ್ಯವಿದೆ ಹಾಗೂ ಪ್ರಜ್ಞಾವಂತ ನಾಗರೀಕರು ಈ ನಿಟ್ಟಿನಲ್ಲಿ ಜಾಗೃತರಾಗಿ ಹಕ್ಕೊತ್ತಾಯ ಮಾಡುವುದು ಇಂದಿನ ಅವಶ್ಯಕತೆ ಅಲ್ಲವೆ?.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

**ಈ ಬಾರಿಯ ಸಾರ್ವತ್ರಿಕ ಚುನಾವಣೆಯಲ್ಲಿ ತಪ್ಪದೇ ಮತದಾನ ಮಾಡಿ ತಮ್ಮ ಹಕ್ಕು ಚಲಾಯಿಸಿ ಪ್ರಜಾಪ್ರಭುತ್ವವನ್ನು ರಕ್ಷಿಸುವಂತೆ ಸಮಾಜ ಬಾಂಧವರಲ್ಲಿ ವಿನಂತಿಸುತ್ತೇವೆ.**

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)




*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging



# ಭಾನುವಾರದ ನಡಿಗೆ ದೇವಳಗಳ ಕಡೆಗೆ



ವೈದ್ಯ ವೃತ್ತಿಯವರಿಗೆ ಅದರಲ್ಲೂ ಶಸ್ತ್ರ ಚಿಕಿತ್ಸಾ ತಜ್ಞರಿಗೆ ವಾರ ಪೂರ್ತಿ ಕೆಲಸವಿದ್ದದ್ದೇ. ಆದರೂ ನಮ್ಮ ಡಾಕ್ಟರ್ ಸುದರ್ಶನ ರಾಯರು (ಸರ್ಜನ್) ಸ್ವಲ್ಪ ಸಮಯ ಶ್ರೀ ಶಾರದಾ ಪತ್ರಿಕೆಗೆ (ಅದರ ಸಂಪಾದಕರಾಗಿ) ಮೀಸಲಿಟ್ಟಿದ್ದಾರೆ. ತಾವು ಉಭಯ ಜಿಲ್ಲೆಗಳ (ದ.ಕ. ಹಾಗೂ ಉಡುಪಿ) ನಮ್ಮವರ ದೇವಳಗಳ ಸಂಪೂರ್ಣ ಮಾಹಿತಿ ಒದಗಿಸುವ ಕೈಪಿಡಿಯನ್ನು ಮುದ್ರಿಸುವ ಉದ್ದೇಶವಿಟ್ಟುಕೊಂಡು, ಅದರ ಮೊದಲು, ಆ ಎಲ್ಲಾ ದೇವಳಗಳನ್ನು ಮುಖತಃ ಸಂದರ್ಶಿಸುತ್ತಾ ಬಳ್ಪ/ಕಡಬ ಭಾಗದ ಕೆಲವು ದೇವಸ್ಥಾನಗಳನ್ನು ನೋಡಲು ಕಳೆದ ಭಾನುವಾರ (ತಾ.24.03.2019) ನನ್ನನ್ನು ಮಾರ್ಗದರ್ಶಿ ಯಾಗಿ ಕರೆದುಕೊಂಡು ಹೊರಟರು. ಉಡುಪಿಯಿಂದ ಮಂಗಳೂರು ಪುತ್ತೂರು– ಪಂಜಕ್ಕಾಗಿ ಬಳ್ಪ ತಲುಪಿ ಶ್ರೀ ತ್ರಿಶೂಲಿನಿ ದುರ್ಗಾ ಪರಮೇಶ್ವರೀ ದೇವಸ್ಥಾನದ ಮಾಹಿತಿ ಸಂಗ್ರಹಿಸಿ ಫೋಟೋ ಕ್ಲಿಕ್ಕಿಸಿ ಕೊಂಡೆವು. ಇದು ಪ್ರಾಚ್ಯ ಸಂಶೋಧನಾ ಇಲಾಖೆಯಿಂದ ನವೀಕೃತ ಗೊಂಡು ನಮ್ಮವರ ಪರಿಶ್ರಮದಿಂದ ಶ್ರೀ ಶೃಂಗೇರಿ ಜಗದ್ಗುರುತ್ರಯರಿಂದ ಬ್ರಹ್ಮಕಲಶ ಹೊಂದಿದೆ. ನಮ್ಮ ಸಮಾಜದ ಆಡಳಿತದಲ್ಲಿ ಪೂಜಾದಿ ಗಳು ನಡೆಯುತ್ತಿದೆ. ಸಮೀಪ ದಲ್ಲಿರುವ ಬಳ್ಪ ಮೊರಾಜೆ ಕುಟುಂಬಸ್ಥರ ಶ್ರೀ ದುರ್ಗಾ ಪರಮೇಶ್ವರೀ ದೇವಾಲಯಕ್ಕೆ ಭೇಟಿಕೊಟ್ಟು ಮೊಕ್ತೇಸರ ಹಾಗೂ ಅರ್ಚಕ ಶ್ರೀವತ್ಸರವ ರಿಂದ ಮಾಹಿತಿ ಸಂಗ್ರಹಿಸಿ, ಪ್ರಸಾದ ಸ್ವೀಕರಿಸಿದೆವು. ನವೀಕೃತ ಈ ಸುಂದರ ದೇವಾಲಯದ ರಂಗಮಂದಿರ ಪೂರ್ಣ ವಾಗಲು ಸಮಾಜದವರಿಂದ ತನು–ಮನ–ಧನದ ಸಹಾಯ ಬೇಕಾಗಿದೆ. ಈ ಎರಡು ದೇವಾಲಯಗಳ ಜೀರ್ಣೋದ್ಧಾರದ ರೂವಾರಿ ಹಾಗೂ ಎಲೆಮರೆಯ ಕಾಯಂತಿರುವ ಮಂಗಳೂರಿನ ಶ್ರೀ ಕರುಣಬೆಳ್ಳೆಯವರು ಅಭಿನಂದನಾರ್ಹರು.

ಮುಂದಕ್ಕೆ ನಮ್ಮ ಪ್ರಯಾಣ ಪಂಜಕ್ಕಾಗಿ ಕಡಬಕ್ಕೆ ತಲುಪಿ ಕ್ಷೇತ್ರದೇವರಾದ ಶ್ರೀ ಮಹಾಗಣಪತಿ–ಶ್ರೀಕಂಠ ದೇವಸ್ಥಾನ ಸಂದರ್ಶಿಸಿ ಸಂಕಷ್ಟಹರ ಗಣಪತಿಯ ಪ್ರಸಾದ ಸ್ವೀಕರಿಸಿದೆವು. ನಮ್ಮ ಸಮಾಜದ ಆಡಳಿತದಲ್ಲಿದ್ದ ಈ ದೇವಸ್ಥಾನ ಈಗ ಧಾರ್ಮಿಕದತ್ತಿ ಇಲಾಖೆಗೆ ಒಳಪಟ್ಟರೂ ಅನುವಂಶಿಕ ಮೊಕ್ತೇಸರರು ನಮ್ಮವರಿದ್ದಾರೆ. ಅಲ್ಲಿಂದ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನಕ್ಕೆ ಹೋಗಿ ಹಿಂದಿರುಗುತ್ತಾ ನಾಲೂರು ಶ್ರೀ ಶಂಕರನಾರಾಯಣ ದೇವರಿಗೆ ಅರ್ಪಿತವಾಗಲಿರುವ ನೂತನ ಗರ್ಭಗುಡಿಯನ್ನು ವೀಕ್ಷಿಸಿದೆವು. ಕಡಬ ಕುಂಭಾಟ ವಂಶಸ್ಥರ ಈ ಪುರಾತನ ದೇವಾಲಯದ ಸುಂದರ ಮೂರ್ತಿಯ ಬಗ್ಗೆ ಸಂಶೋಧಕ ದಿ। ಪಾದೂರು ಗುರುರಾಜ ಭಟ್ಟರು ಉಲ್ಲೇಖಿಸುತ್ತಾ "ಬಹಳ ಅಪೂರ್ವವಾದ ವಿಗ್ರಹವಿದಾಗಿದೆ" ಎಂದು ಬಣ್ಣಿಸಿದ್ದಾರೆ. ಇಲ್ಲಿ ಸದ್ಯದಲ್ಲೇ ಬ್ರಹ್ಮಕಲಶ ನೆರವೇರಲಿದೆ. ಮಧ್ಯಾಹ್ನದ ಭೋಜನವನ್ನು ಸತ್ಯಶ್ರೀ ಮೆಡಿಕಲ್ಸ್ ಕಡಬ ಇದರ ಮಾಲಕರಾದ ಶ್ರೀ ರಾಜೇಶ್ ಕೋಲ್ಪೆಯವರ ಮನೆಯಲ್ಲಿ ಪೂರೈಸಿ, ಅಲ್ಪ ವಿಶ್ರಾಂತಿ ಪಡೆದು ಉಪ್ಪಿನಂಗಡಿ ಮಾರ್ಗವಾಗಿ ಸಾಗಿ ಕ್ಯೊಲ ಎಂಬಲ್ಲಿ ಬಲಕ್ಕೆ ತಿರುಗಿ ಸುಮಾರು 2–3 ಕಿ.ಮೀ ಕ್ರಮಿಸಿ ಬಡೆಂಜ ಶ್ರೀ ಸುಬ್ರಹ್ಮಣ್ಯ ದೇವಸ್ಥಾನವನ್ನು ಸಂದರ್ಶಿಸಿದೆವು. ಅರ್ಚಕ ಮೊಕ್ತೇಸರ ಕೊಳಂದೂರು ನಿರಂಜನರಾವ್ ರವರಿಂದ ಮಾಹಿತಿ ಪಡೆದು ಹಿಂತಿರುಗಿ ಉಪ್ಪಿನಂಗಡಿ–ವಾಣಿಗಾಗಿ ಕಲ್ಲಡ್ಕದ ಹತ್ತಿರವಿರುವ ನೆಟ್ಲ ಮಠಕ್ಕೆ ಆಗಮಿಸಿ ಅರ್ಚಕರಿಂದ ಪ್ರಸಾದ ಸ್ವೀಕರಿಸಿದೆವು. ಇಲ್ಲಿ ಶ್ರೀ ವೆಂಕಟರಮಣ ದೇವರ ಸನ್ನಿಧಿ ಇದ್ದು, ನೆಟ್ಲ ಮುಂಡಾಜೆ ಮನೆತನದವರ ಆಡಳಿತದಲ್ಲಿದೆ. ಇದು ಜೀರ್ಣೋದ್ಧಾರ ವಾಗಬೇಕಿದೆ. ಅಲ್ಲಿಂದ ಹಿಂತಿರುಗಿ ಬಿ.ಸಿ. ರೋಡ್ ಮಂಗಳೂರಿಗಾಗಿ ಮುಸ್ಸಂಜೆ ಯಾಗುತ್ತಿದ್ದಂತೆ ಸ್ವಸ್ಥಾನ–ಉಡುಪಿ ತಲುಪಿದೆವು. ಸುಮಾರು 300 ಕಿ.ಮೀ ಪ್ರಯಾಣವನ್ನು 10–11 ತಾಸಿನಲ್ಲಿ ಕ್ರಮಿಸಿ ಸಾಕಷ್ಟು ಮಾಹಿತಿ ಸಂಗ್ರಹಿಸಿದ ಡಾಕ್ಟರ್ ಸುದರ್ಶನರ ಸಾಹಸ ಶ್ಲಾಘನೀಯ. ಸದ್ಯದಲ್ಲೇ ಪ್ರಕಟಗೊಳ್ಳಲಿರುವ ಈ ಮಾಹಿತಿ ಕೈಪಿಡಿ "ಅಸ್ಮಿತೆ"ಗೆ ಶುಭ ಹಾರೈಸೋಣ.

**ಲೇಖಕ : ಜಿ.ಕೆ. ಕೋಲ್ಪೆ, ಉಡುಪಿ**

Ph : 98459 92859

Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ.

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**


ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ – 574 116.
ಇ–ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು



D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

# 'ಯಕ್ಷದೇವರ' ಅಮೇರಿಕಾ ದಿಗ್ವಿಜಯ (ಸ್ಮರಣೆಯೊಂದೇ ಸಾಲದು)

ಯಕ್ಷಗಾನದ ಸೀಮೋಲ್ಲಂಘನ ವಿವಿಧ ರೀತಿಗಳಲ್ಲಿ ಆಗಿದೆ ಮತ್ತು ಆಗುತ್ತಿದೆ ಎನ್ನುವುದು ಈಗ ಹಳೆಯ ಕತೆ. ಕಳೆದ ಹಲವಾರು ವರ್ಷಗಳಲ್ಲಿ ಬಡಗು ಮತ್ತು ತೆಂಕುತಿಟ್ಟಿನ ಯಕ್ಷಗಾನ ತಂಡಗಳು ವಿದೇಶಗಳಲ್ಲಿ ಪ್ರದರ್ಶನ ನೀಡಿವೆ. ಪ್ರದರ್ಶನಗಳು ಮಾತ್ರವಲ್ಲದೆ ಅಲ್ಲಿಯ ಆಸಕ್ತರಿಗೆ ತರಬೇತಿ, ಪ್ರಾತ್ಯಕ್ಷಿಕೆ, ಉಪನ್ಯಾಸಗಳ ಮೂಲಕ ಯಕ್ಷಗಾನವನ್ನು ಪರಿಚಯಿಸಿವೆ. ವಿದೇಶಗಳಲ್ಲಿ ಯಕ್ಷಗಾನ ಎನ್ನುವುದು ಸುಮಾರು ಮೂರು ವಿಭಾಗಗಳಲ್ಲಿ ಪ್ರದರ್ಶನ ಕಂಡಿದೆ. 1. ಅಲ್ಲಿಯ ಕಲಾಭ್ಯಾಸಿಗಳಿಗೆ ಮಿತ ಸಮಯದಲ್ಲಿ ತರಬೇತಿ ಕೊಟ್ಟು ಅವರಿಂದ ಕಿರು ಯಕ್ಷಗಾನ ಮಾಡಿಸಿರುವುದು. 2. ಬೇರೆ ಬೇರೆ ದೇಶಗಳಲ್ಲಿ ಕಲೋತ್ಸವಗಳಲ್ಲಿ ಭಾಗವಹಿಸಿರುವುದು 3. ವಿದೇಶಗಳಲ್ಲಿ ವಾಸವಾಗಿರುವ ನಮ್ಮೂರಿನವರು ಕಟ್ಟಿಕೊಂಡಿರುವ ಹಲವಾರು ಸಂಘ, ಒಕ್ಕೂಟಗಳವರು ತಮ್ಮ ತಾಯ್ನೆಲದ ಪ್ರೀತಿಯಿಂದ, ಅವರ ಸ್ವಂತ ಆಸಕ್ತಿಯಿಂದ ಊರಿನ ಕಲಾತಂಡಗಳನ್ನು ಆಹ್ವಾನಿಸಿ ಅವರಿಂದ ಯಕ್ಷಗಾನ ಮಾಡಿಸಿರುವುದು ಈ ಮೂರನೆ ವಿಭಾಗದ ಯಕ್ಷಗಾನ ಪ್ರದರ್ಶನದಲ್ಲಿ ಕಲಾಭಿಮಾನ, ಕಲಾವಿದರ ಬಗ್ಗೆ ಇರುವ ಆದರ ಮತ್ತು ಜನಸಾಮಾನ್ಯರ ಯಕ್ಷಗಾನೀಯ ಮನೋರಂಜನೆ ಮುಖ್ಯವಾಗಿರುತ್ತದೆ. ಕಲಾವಿದರಿಗೆ ವಿದೇಶದಲ್ಲಿ ಕಾರ್ಯಕ್ರಮ ಕೊಟ್ಟಿದ್ದೇವೆ ಎಂಬ ಹೆಮ್ಮೆಯಾದರೆ, ಆತಿಥ್ಯ ನೀಡಿದ ತಂಡದವರಿಗೆ ಕಲಾನಂದದ ಒಂದು ಸಂದರ್ಭವನ್ನು ಅಲ್ಲಿ ವಾಸಿಸುತ್ತಿರುವವರಿಗೆ ಒದಗಿಸಿದ್ದೇವೆ ಎಂಬ ಸಂತೋಷ. ಜೊತೆಗೆ ಕಲಾವಿದರ ಒಡನಾಟದ ಧನ್ಯತೆಯೂ ಇರುತ್ತದೆ. ಅದರೊಂದಿಗೆ ಸ್ಮೃತಿವ್ಯಸನದ (Nostalgia) ಸುಖವೂ ಅವರಿಗಾಗುತ್ತದೆ. ಈ ವರ್ಷ ಜುಲೈ ಮತ್ತು ಅಗೋಸ್ತು ತಿಂಗಳಲ್ಲಿ ವಿಶಾಲ ಅಮೇರಿಕಾದ ವಿವಿಧ ರಾಜ್ಯಗಳಲ್ಲಿ ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿ, ಬೆಳುವಾಯಿ, ಮೂಡಬಿದರೆ, ಇವರ ಕಲಾವಿದರ ತಂಡವು ಕೆಲವು ದಾಖಲೆಗಳನ್ನು ನಿರ್ಮಿಸಿತು ಎನ್ನುವುದು ಮಾಮೂಲು ಪ್ರಶಂಸೆಯ ಮಾತಲ್ಲ.

ದಕ್ಷಿಣ ಕನ್ನಡದ ಬೆಳುವಾಯಿ ಯಲ್ಲಿ ಯಕ್ಷಗಾನ ಕಲಾವಿದರೂ, ಛಾಯಾ ಚಿತ್ರಗಾರರೂ ಆಗಿರುವ ಶ್ರೀ ದೇವಾನಂದ ಭಟ್ಟರು ಹಲವಾರು ದಾನಿಗಳ ಸಹಕಾರ, ಸಹಾಯ, ಪ್ರೋತ್ಸಾಹಗಳಿಂದ ಕಳೆದ ಸುಮಾರು ಇಪ್ಪತ್ತು ವರ್ಷಗಳಲ್ಲಿ ನಾನಾ ಬಗೆಯ ಪ್ರಯೋಗಾತ್ಮಕ ಯಕ್ಷಗಾನ ಕಾರ್ಯಕ್ರಮಗಳನ್ನು (ಉತ್ಸವಗಳನ್ನು) ಸಂಯೋಜಿಸಿ, ಯಕ್ಷಗಾನದ ಆಯಾಮಗಳನ್ನು ವಿಸ್ತರಿಸಿ, ಯಕ್ಷಗಾನಕ್ಕೆ ಹೊಸ ಆಕರ್ಷಣೆ ತೆರುವ ಪ್ರಯತ್ನ ಮಾಡುತ್ತ ಬಂದಿದ್ದಾರೆ. ಸಂಯೋಜನೆ ಇವರಿಗೆ ಹೊಸದೇನಲ್ಲ. ಇತರ ತಂಡದೊಂದಿಗೆ ಸಹಕಲಾವಿದನಾಗಿ ಈಗಾಗಲೇ ಹಲವು ಬಾರಿ ವಿದೇಶಗಳಿಗೆ ಹೋಗಿ ಬಂದವರು. ಈ ವರ್ಷ ಇವರಿಗೊಂದು ಹೊಸ ಸವಾಲು. ಅಮೇರಿಕಾದ ಮೇರಿಲ್ಯಾಂಡಿನ, ಶ್ರೀ ಭಕ್ತ ಆಂಜನೇಯ ದೇವಸ್ಥಾನದ ಮುಖ್ಯಸ್ಥರಾದ ಶ್ರೀಬಾಲಕೃಷ್ಣ ಭಟ್ಟರ ಆಹ್ವಾನದ ಮೇರೆಗೆ ಶ್ರಿ ದೇವಾನಂದ ಭಟ್ಟರು, ಯಕ್ಷಗಾನದ ಸತ್ವವನ್ನು ಚೆನ್ನಾಗಿ ಪ್ರಕಟಿಸಬಲ್ಲ ಪ್ರಸಿದ್ಧ ಕಲಾವಿದರನ್ನೇ ಆಯ್ಕೆಮಾಡಿದರು. ಪಟ್ಲ ಸತೀಶ ಶೆಟ್ಟಿ (ಭಾಗವತ) ಪದ್ಮನಾಭ ಉಪಾಧ್ಯ (ಮದ್ದಳೆ) ದೇವಾನಂದ (ಚೆಂಡೆ) ಇವರು ಹಿಮ್ಮೇಳದ ಕಲಾವಿದರಾದರೆ ವೇಷಧಾರಿಗಳಾಗಿ ಎಂ.ಎಲ್. ಸಾಮಗ ಚಂದ್ರಶೇಖರ ಧರ್ಮಸ್ಥಳ, ಮಹೇಶ ಮಣಿಯಾಣಿ, ಮೋಹನ ಬೆಳ್ಳಿಪ್ಪಾಡಿ ಮತ್ತು ಪ್ರಶಾಂತ ಶೆಟ್ಟಿ ನೆಲ್ಯಾಡಿ.

ಕಲಾಪ್ರದರ್ಶನಕ್ಕಾಗಿ, ತರಬೇತಿ ಪ್ರಾತ್ಯಕ್ಷಿಕೆಗಳಿಗಾಗಿ, ಅಮೇರಿಕಾಕ್ಕೆ ಹೋಗುವ ಕಲಾವಿದರು ಪ್ರತ್ಯೇಕವಾದ P3 ವೀಸಾ ಪಡೆಯಬೇಕು. ಈ ದಿನಗಳಲ್ಲಿ ವೀಸಾ ಪಡೆಯುವುದೇ ಬಹು ಕಷ್ಟದ, ಅನಿಶ್ಚಿತತೆಯ ಕೆಲಸ. ಒಂಭತ್ತು ಕಲಾವಿದರಿಗೆ ಎರಡು ತಿಂಗಳಿಗಾಗಿ ವೀಸಾ ಅರ್ಜಿ ಹಾಕಿದ್ದರೂ ಚೆನ್ನೈಯಲ್ಲಿ ವೀಸಾ–ಸಂದರ್ಶನ ನಡೆದಾಗ ಇಬ್ಬರು ಕಲಾವಿದರಿಗೆ ವೀಸಾ ನಿರಾಕರಿಸಲ್ಪಟ್ಟಿತು. ಪ್ರದರ್ಶಿಸಲ್ಪಡಬೇಕಾಗ ಪ್ರಸಂಗಳಿಗೆ ಈ ಕಲಾವಿದರು ಮುಖ್ಯವಾದ್ದರಿಂದ ಸೂತ್ರಧಾರ ಪಟ್ಲ ಸತೀಶ ಹಾಗೂ ನೇತಾರ ದೇವಾನಂದರು ಕಾರ್ಯ ಜಾಣ್ಮೆಯಿಂದ ಈಗಾಗಲೇ ಅಮೇರಿಕಾ ವೀಸಾ ಊರ್ಜಿತದಲ್ಲಿರುವ ಇನ್ನೋರ್ವ ಕಲಾವಿದನನ್ನು ಊರಿಂದ ಕರೆಸಿಕೊಂಡು ತಂಡದ ಪ್ರದರ್ಶನ ಸಾಮರ್ಥ್ಯದಲ್ಲಿ ಕೊರತೆ ಬಾರದಂತೆ ಜಾಗ್ರತೆ ವಹಿಸಿದರು.

ಹಾಗೆಯೇ, ವೀಸಾಕ್ಕಾಗಿ ಚೆನ್ನೈಯಲ್ಲಿ ಸುಮಾರು 11 ದಿನ ಕಳೆಯಬೇಕಾದ ಸಂದರ್ಭದಲ್ಲಿ 'ಯಕ್ಷದೇವ'ರ ಅಮೇರಿಕಾ ಸಂಚಾರಕ್ಕೆ ಪೂರ್ವದಲ್ಲಿ ಚೆನ್ನೈಯಲ್ಲೇ ಮೂರು ಪ್ರದರ್ಶನ ನೀಡಿ ತಮ್ಮ ಕಲಾಪ್ರೌಢಿಮೆಯನ್ನು ಚೆನ್ನೈ ಪ್ರೇಕ್ಷಕರಿಗೆ ಶ್ರುತಪಡಿಸಿದ್ದು ಈ ತಂಡದ ಒಂದು ಹೆಗ್ಗಳಿಕೆ. ವಿಶ್ವಪ್ರಸಿದ್ಧ ಕಲಾಶಿಕ್ಷಣ ಕೇಂದ್ರವಾಗಿರುವ ಚೆನ್ನೈನ ಕಲಾಕ್ಷೇತ್ರದಲ್ಲಿ, ಅದರ ನಿರ್ದೇಶಕಿಯಾದ ಶ್ರೀಮತಿ ರೇವತಿರಾಮಚಂದ್ರನ್ ಅವರ ಸೂಚನೆಯ ಮೇರೆಗೆ ತಾ.30.06.2018ರಂದು ಬೆಳಿಗ್ಗೆ 9.00ರಿಂದ 10.30ರ ವರೆಗೆ ಅಲ್ಲಿಯ ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ವೀಕ್ಷಣೆಗಾಗಿ ಪ್ರದರ್ಶಿಸಿದ ಪ್ರಾತ್ಯಕ್ಷಿಕೆ ಸಹಿತವಾದ 'ನರಕಾಸುರವಧೆ' ಪ್ರಸಂಗ ಈ ತಂಡದ ವಿದೇಶ ಕಲಾಯಾನದ ಮೊದಲ ಯಶಸ್ವಿ ಪ್ರಯೋಗವಾಗಿತ್ತು. ಭಾಗವತರ ಶಾರೀರ ಶ್ರೇಷ್ಠತೆ, ಪಾತ್ರಧಾರಿಗಳ ಅಭಿನಯ ಸಹಿತವಾದ ನರ್ತನದ ಪ್ರೌಢತೆ ಪ್ರೇಕ್ಷಕರ ಮುಕ್ತಕಂಠದ ಪ್ರಶಂಸೆಗೆ ಪಾತ್ರವಾಗಿತ್ತು. ಅಂತೆಯೇ, ಚೆನ್ನೈನ ಶ್ರೀ ನಾರಾಯಣ ಭಟ್ ಮತ್ತು ಅವರ ಬಳಗದವರ ಸಹಕಾರದಿಂದ ಕರ್ನಾಟಕ ಸಂಘ ಹಾಗೂ ಬಂಟರ ಸಂಘದವರು ಪ್ರಾಯೋಜಿಸಿದ 'ದಕ್ಷಯಜ್ಞ' (ಆಟ) ಮತ್ತು 'ಭೀಷ್ಮಾರ್ಜುನ' (ತಾಳಮದ್ದಲೆ) ತಂಡದ ದೀರ್ಘ ಪ್ರಯಾಣಕ್ಕೆ ಆತ್ಮವಿಶ್ವಾಸ ಮೂಡಿಸುವ ಶುಭ ಹಾರೈಕೆಯ ನಾಂದಿಯಾಗಿತ್ತು.

ಜುಲೈ 11ರಿಂದ ಅಗೋಸ್ತು 20ರ ತನಕ ಉತ್ತರ ಅಮೇರಿಕಾದ ಪೂರ್ವಭಾಗದ ಎಡಿಸನ್‌ನಿಂದ ಹೊರಟ ಕಲಾವಿದರ ತಂಡವು, ಅರ್ಜುನನ ತೀರ್ಥಯಾತ್ರೆಯಂತೆ, ಸ್ವಲ್ಪ ಉತ್ತರಾಭಿಮುಖವಾಗಿ ಚಲಿಸಿ ಬಳಿಕ ದಕ್ಷಿಣಾಭಿಮುಖವಾಗಿ ಮುಂದುವರಿದು, ಮಧ್ಯಭಾಗಕ್ಕೂ ಭೇಟಿಯಿತ್ತು, ವಿಶಾಲ ಅಮೇರಿಕಾದ ಪಶ್ಚಿಮಪ್ರಾಂತ್ಯಗಳಲ್ಲೂ ಸಂಚರಿಸಿತು.ಒಟ್ಟು ಅಮೇರಿಕಾದ ಹತ್ತು ರಾಜ್ಯಗಳ 12 ಪಟ್ಟಣಗಳಲ್ಲಿ, ಪ್ರತಿಕಡೆಯಲ್ಲೂ ಸುಮಾರು ಎರಡೂವರೆ ತಾಸುಗಳ ಯಕ್ಷಗಾನ ಪ್ರದರ್ಶಿಸಿತು. ಇವುಗಳಲ್ಲಿ 14 ಯಕ್ಷಗಾನ ಆಟಗಳಾದರೆ, 1 ತಾಳಮದ್ದಳೆ ಹಾಗೂ 3 ಯಕ್ಷಗಾಯನಗಳು.

ಪ್ರವೇಶಿಸಿದ ರಾಜ್ಯಗಳು: ನ್ಯೂಜೆರ್ಸಿ, ಪೆನ್ಸಿಲ್ವೇನಿಯಾ, ಮೆಸಾಚುಸೆಟ್ಸ್, ನಾರ್ತ್‌ಕ್ಯಾರೋಲಿನಾ, ಮೇರಿಲ್ಯಾಂಡ್, ಟೆಕ್ಸಾಸ್, ಮಿಸ್ಸೋರಿ, ಕ್ಯಾಲಿಫೋರ್ನಿಯ, ವಾಶಿಂಗ್‌ಟನ್ ಮತ್ತು ಅರಿಜೋನ.

ಕಾರ್ಯಕ್ರಮಗೈದ ಪಟ್ಟಣಗಳು: ಎಡಿಸನ್, ಸ್ಟ್ರೌಡ್ಸ್‌ಬರ್ಗ್, ಬಾಸ್ಟನ್, ರ್‍ಯಾಲಿ, ಆಮ್ಸ್‌ವಿಲ್, ಡಾಲಸ್, ಹ್ಯೂಸ್ಟನ್, ಆಸ್ಟಿನ್, ಸೈಂಟ್‌ಲೂಯಿಸ್, ಸ್ಯಾನ್‌ಹೊಸೆ, ಸಿಯಾಟಲ್, ಫೀನಿಕ್ಸ್ ಮತ್ತು ಲಾಸ್‌ಎಂಜಲಿಸ್.

ಅಮೇರಿಕಾವಾಸಿಗಳಾದ ನಮ್ಮೂರಿನವರ ಕೋರಿಕೆಯ ಮೇರೆಗೆ ಒಂಭತ್ತು ಕಡೆಗಳಲ್ಲಿ 'ಮಹಿಷಾಸುರ ವಧೆ' ಪ್ರಸಂಗ ಪ್ರದರ್ಶಿಸಲ್ಪಟ್ಟರೆ ಮೇರಿಲ್ಯಾಂಡ್‌ನ ಆಮ್ಸ್‌ವಿಲ್‌ನ ಶ್ರೀ ಭಕ್ತ ಆಂಜನೇಯ ದೇವಸ್ಥಾನದಲ್ಲಿ ತಂಡದ ಮುಖ್ಯ ಪ್ರವರ್ತಕರ ಅಪೇಕ್ಷೆಯ ಮೇರೆಗೆ, 5 ಜನ ವೇಷಧಾರಿಗಳೇ ಕೆಲವು ಸ್ಥಳೀಯರ ಸಹಕಾರದೊಂದಿಗೆ ಸಂಕ್ಷಿಪ್ತ ಸಂಪೂರ್ಣ ದೇವಿಮಹಾತ್ಮೆಯನ್ನು ಅಭಿನಯಿಸಿದುದು ಅಲ್ಲಿಯ ಪ್ರೇಕ್ಷಕರಿಗೆ ವಿಶೇಷ ರಸದೂಟವಾಗಿತ್ತು. ಸಿಯಾಟಲ್‌ನ ಕಲಾಬಂಧುಗಳ ಕೂಟದಲ್ಲಿ ಅಲ್ಲಿಯ ಮಕ್ಕಳಿಗೆ ಮುಖವರ್ಣಿಕೆ ಮಾಡಿ ಶಕಟಾಸುರವಧೆಯ ಪ್ರಾತ್ಯಕ್ಷಿಕೆ ಮಾಡಿದ್ದರಿಂದ ಅವರಲ್ಲಿ 'ಯಕ್ಷಗಾನವನ್ನು ನಾವು ಕಲಿಯಬೇಕು' ಎಂಬ ಆಸೆ ಮೂಡಿತು. ಆಧುನಿಕ ಸಂವಹನ ಸಾಧ್ಯತೆಗಳು ಬೆಳೆದಿರುವ ಈ ಕಾಲದಲ್ಲಿ (ಸ್ಕೈಪ್, ವಾಟ್ಸಪ್ ಇತ್ಯಾದಿ) 'ಯಕ್ಷಗಾನದ ಪಾಠಗಳನ್ನು ನಮಗೂ ಮಾಡಿ' ಎಂಬ ಬೇಡಿಕೆ ಗಂಡಸರು ಮತ್ತು ಹೆಂಗಸರಿಂದ ಬಂದುದು ನಮ್ಮೂರಿನ ಯಕ್ಷಶಿಕ್ಷಕರಿಗೆ ಈಗ ಒಂದು ಹೊಸ ಸವಾಲು. ಸೈಂಟ್ ಲೂಯಿಸ್‌ನ ಅರವಿಂದ ಉಪಾಧ್ಯರ ಮುತುವರ್ಜಿಯಲ್ಲಿ ಅಲ್ಲಿನ ಸಂಗೀತ ಶಿಕ್ಷಕರಾದ ಪಾಂಡುರಂಗಿ ದಂಪತಿಗಳ ಮನೆಯಲ್ಲಿ ಒಂದು 'ಯಕ್ಷಸಂಗೀತ' ಕಾರ್ಯಕ್ರಮ ಕಲಾಭಿಜ್ಞರ ವಿಶ್ಲೇಷಣೆಗೆ ಒಳಪಟ್ಟಿತು. ಈಗಾಗಲೇ 'ಗಾನವೈಭವ' ಕಾರ್ಯಕ್ರಮಗಳ ಮೂಲಕ (ಯೂಟ್ಯೂಬ್ ಪ್ರಸಾರದ ಕೃಪೆಯಿಂದ) ಜಗತ್ತಿನೆಲ್ಲೆಡೆ ಪ್ರಸಿದ್ಧರಾಗಿರುವ ಪಟ್ಲ ಸತೀಶ್ ಶೆಟ್ಟಿಯವರ ಹಾಡುಗಾರಿಕೆ ಹಾಗೂ ಪದ್ಮನಾಭ ಉಪಾಧ್ಯರ ಮದ್ದಳೆವಾದನ ಪ್ರಶಂಸಾತ್ಮಕ ಕರತಾಡನದೊಂದಿಗೆ, ಪ್ರೇಕ್ಷಕರ ಕುತೂಹಲದ ಪ್ರಶ್ನೆಗಳನ್ನೂ ಮೂಡಿಸಿತು. ಯಕ್ಷಸಂಗೀತದ ಶಾಸ್ತ್ರೀಯತೆ ಮತ್ತು ಜನಾಕರ್ಷಣೆಯನ್ನು ಅವರಿಗೆ ಮನವರಿಕೆ ಮಾಡಿತು.

ಹ್ಯೂಸ್ಟನ್ ನಿವಾಸಿ, ಯಕ್ಷಗಾನ ಗೀಳಿನ ಕಲಾಪೋಷಕ ವಾಸುದೇವ ಐತಾಳರ ವಿಶೇಷ ಶ್ರಮದಿಂದ, ಅಲ್ಲಿಯ ಶ್ರೀ ಪುತ್ತಿಗೆ ಮಠದ ಹೊರಾಂಗಣದಲ್ಲಿ ನಮ್ಮೂರಿನ ಬಯಲಾಟದ ಪ್ರತಿಸೃಷ್ಟಿಯೇ ಆಗಿತ್ತು. ಸ್ಥಳೀಯ ಸರಕಾರಿ ಆಡಳಿತದಿಂದ ವಿಶೇಷ ಪರವಾನಿಗೆ ಪಡೆದ ಐತಾಳರು ಕಟೀಲು ಮೇಳದ ರಂಗಸ್ಥಳ ನೆನಪಿಸುವ ಮಿತ ಅಲಂಕಾರದ ರಂಗಸ್ಥಳ ನಿರ್ಮಿಸಿದ್ದರು. ಮಹಿಷಾಸುರ ದೊಂದಿ–ರಾಳದೊಂದಿಗೆ, ವಾದ್ಯ–ತವಿಲುಗಳೊಂದಿಗೆ ಬಯಲ ಮಧ್ಯದಿಂದ ಪ್ರವೇಶಿಸುವಾಗ ಪ್ರೇಕ್ಷಕರಿಗೆ ವರ್ಣನಾತೀತ ಪುಳಕ, ಒಂದು ಹೊಸಲೋಕ ಪ್ರವೇಶಿಸಿದ ಅನುಭವ. ಬಯಲಾಟದ ಅನುಭವ ನಿರ್ಮಿಸುವಲ್ಲಿ ಪಟಾಕಿ, ದುರ್ಸು, ಸುಡುಮದ್ದುಗಳ ಗೌಜಿ, ಮಾತ್ರವಲ್ಲದೆ ಮಾರಾಟ ಮಾಡಲಾಗುತ್ತಿದ್ದ ಮುಂಡಕ್ಕಿ ಚರಮುರಿಗಳ ಪಾಲೂ ಇದ್ದವು.

ಇದರ ಪರಿಣಾಮವಾಗಿ ಆ ಬಳಿಕ ಎಲ್ಲೆಡೆ 'ಮಹಿಷಾಸುರ ವಧೆ' ಪ್ರಸಂಗಕ್ಕೆ ಬೇಡಿಕೆ. ಬೆಂಕಿಯ ಬಳಕೆಗೆ ನಿಷೇಧವಿದ್ದುದರಿಂದ, ಸೈಂಟ್ ಲೂಯಿಸ್‌ನ ಅರವಿಂದ ಉಪಾಧ್ಯರು, ದೊಂದಿಯ ಪರಿಣಾಮವನ್ನು ಬೀರುವ, ಬ್ಯಾಟರಿಚಾಲಿತ ಒಂದು ದೊಂದಿಯನ್ನು ('ಮೇಡ್‌ಇನ್ ಚೈನಾ') ತರಿಸಿಕೊಂಡು, ಸಭಾಗ್ರಹದೊಳಗೆ ಮಹಿಷಾಸುರನಿಗೆ ಅದನ್ನು ಬಳಸುವಂತೆ ವಿನಂತಿಸಿದರು. ಮುಂದಿನ ಆಟಗಳಲ್ಲಿ ಇದೇ ಬಳಸಲ್ಪಟ್ಟಿತು.

ಸ್ಯಾನ್ ಹೊಸೆಯಲ್ಲಿ ಪ್ರದರ್ಶನಗೊಂಡ ಎರಡು ಆಟಗಳಲ್ಲಿ 'ಸುದರ್ಶನ ವಿಜಯ'ವೂ ಒಂದು. ಹಾಸ್ಯ ಮತ್ತು ಬೋಧನೆಗಳ ಸಂಯುಕ್ತತೆಯಲ್ಲಿ ಆ ಪ್ರಸಂಗ ಜನರನ್ನು ರಂಜಿಸಿದರೂ, 'ಮಹಿಷಾಸುರ ವಧೆ' ಯೇ ಅವರಿಗೆ ಹೆಚ್ಚು ಪ್ರಿಯವಾದ ಯಕ್ಷಗಾನವಾಗಿತ್ತು. (ನಮ್ಮೂರಿನಲ್ಲೂ ಹಾಗೆಯೆತಾನೆ!). ಈ ದಿಸೆಯಲ್ಲಿ ಯೋಚಿಸುವಾಗ ಯಕ್ಷಗಾನದ ಸರ್ವಜನಾದರಣೀಯ ಆಕರ್ಷಣೆಯ ಅಂಶಗಳಾವುವು ಎನ್ನುವುದು ಸ್ಫುಟವಾಗತೊಡಗಿತು. ಒಂದು ಕಲೆಯ ಆತ್ಯಂತಿಕ ಪರಿಣಾಮ 'ಶಾಂತರಸ'ದ ಉತ್ಪತ್ತಿ ಎಂದು ಕಲಾ ಮೀಮಾಂಸೆ ಸಾರಬಹುದು. ಪ್ರೌಢ, ಪ್ರಬುದ್ಧ ಪ್ರೇಕ್ಷಕರೂ ಇದೇ ಪರಿಣಾಮ ಅಪೇಕ್ಷಿಸಬಹುದು. ಆದರೆ ಅಸಾಮಾನ್ಯತೆ, ವಿಸ್ಮಯ, ಅದ್ಭುತ ಆಶ್ಚರ್ಯಜನಕ ದೃಶ್ಯಗಳೇ ಕಲೆಯ ಮೊದಲ ಆಕರ್ಷಣೆ ಎನ್ನುವುದನ್ನು ಅಮೇರಿಕಾದ ಪ್ರೇಕ್ಷಕರೂ ಸಾಬೀತು ಪಡಿಸಿದರು. ವೀರರಸ ಕುಣಿತದ ದೀರ್ಘಕಾಲದ ಗಿರ್ಕಿ, ಮಾಲಿನಿ ಮಹಿಷಾಸುರನನ್ನು ತನ್ನ ಮಗುವಿನಂತೆ ಎತ್ತಿ ಸೊಂಟದಲ್ಲಿ ಇರಿಸಿಕೊಳ್ಳುವುದು, ಸಮಯ ಸ್ಫೂರ್ತಿಯಿಂದ ಸಾಮಾಜಿಕ ಸಂಗತಿಯನ್ನು ಉದಾಹರಿಸಿ ಜನರನ್ನು ನಗುವಂತೆ ಮಾಡುವ ಹಾಸ್ಯ, ಮಹಿಷಾಸುರ ದೊಂದಿ ಹಿಡಿದುಕೊಂಡು ಸಭೆಯಲ್ಲಿ

(5ನೇ ಪುಟಕ್ಕೆ...)



ಎಮ್. ದೇವಾನಂದ್ ಭಟ್
Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**Buying and selling shares as easy as checking your emails**

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ

ಪಾವಂಜೆ–ಹಳೆಯಂಗಡಿ–574146, ದ.ಕ..

ಆತ್ಮೀಯರೇ

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರ
ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿದಾನಂಗಳವರ ಪರಮಾನುಗ್ರಹದಿಂದ

ಶ್ರೀ ವಿಲಂಬಿ ನಾಮ ಸಂವತ್ಸರದ ಮೀನ ಮಾಸ ದಿನ ೩೦ ಸಲುವ **ದಿನಾಂಕ 13–04–2019ನೇ ಶನಿವಾರದಿಂದ** ಶ್ರೀ ವಿಕಾರಿ ನಾಮ ಸಂವತ್ಸರದ ಮೇಷ ಮಾಸ ದಿನ ೫ ಸಲುವ **ದಿನಾಂಕ 19–04–2019ನೇ ಶುಕ್ರವಾರದವರೆಗೆ ಶ್ರೀ ದೇವಸ್ಥಾನದಲ್ಲಿ**

## ವಾರ್ಷಿಕ ಜಾತ್ರಾ ಮಹೋತ್ಸವವು

ದಿನಾಂಕ 18–04–2019ನೇ ಗುರುವಾರದಂದು

## ಮಹಾ ರಥೋತ್ಸವದೊಂದಿಗೆ

ನೆರವೇರಲಿದೆ. ಈ ಎಲ್ಲಾ ದಿನಗಳಲ್ಲಿ ತಾವೆಲ್ಲರೂ ಬಂದು ಉತ್ಸವದಲ್ಲಿ ಭಾಗವಹಿಸಿ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

**ಶ್ರೀ ಯಂ. ಶಶೀಂದ್ರ ಕುಮಾರ್**
ಆಡಳಿತ ಮೊಕ್ತೇಸರರು

**ಡಾ|ಯಾಜಿ ಎಚ್. ನಿರಂಜನ ಭಟ್**
ಧರ್ಮದರ್ಶಿಗಳು

## 'ಯಕ್ಷದೇವರ' ಅಮೇರಿಕಾ ದಿಗ್ವಿಜಯ (ಸ್ಮರಣೆಯೊಂದೇ ಸಾಲದು)

■...4ನೇ ಪುಟದಿಂದ

ಸಂಚಾರ ಮಾಡಿ ಬಳಿಕ ರಂಗಸ್ಥಳ ಪ್ರವೇಶಿಸುವುದು, ಸಿಂಹ ಮಹಿಷಾಸುರ ಯುದ್ಧ, ಭಾಗವತರ ಶಕ್ತಿಪೂರ್ಣ ತಾರಕದಿಂದ ಮಂದ್ರಕ್ಕೆ ಸಂಚರಿಸಬಲ್ಲ ಕಂಠಶ್ರೀ– ಇತ್ಯಾದಿ ಅಂಶಗಳೇ ಜನರನ್ನು ಸುಲಭದಲ್ಲಿ ತಲುಪುವ ಸಂತೋಷಜನಕ ಅಂಶಗಳಾಗಿದ್ದವು. ಸಿಳ್ಳು, ಕೇಕೆ, ಕರತಾಡನಗಳು ಸಾರ್ವತ್ರಿಕ ಸಂತೋಷಾಭಿವ್ಯಕ್ತಿಯ ಸಂಕೇತಗಳು. ನಮ್ಮ ಯಕ್ಷಗಾನವನ್ನು ನೋಡುತ್ತ ಅಲ್ಲಿರುವ ನಮ್ಮವರು ತಮ್ಮ ಊರಿನಲ್ಲಿ ಕಂಡ ಯಕ್ಷಗಾನವನ್ನು ಸ್ಮರಣೆಗೆ ತಂದುಕೊಂಡೇ ಪ್ರದರ್ಶನದ ಸವಿಯನ್ನು ಚಪ್ಪರಿಸಿದರು.

ಯಕ್ಷಗಾನ ಪ್ರಸಾರ ಮಾಡುವ ನಿಟ್ಟಿನಲ್ಲಿ ಶ್ರೀ ಯಕ್ಷದೇವ ಮಿತ್ರಕಲಾ ಮಂಡಳಿ ಅಮೇರಿಕದಲ್ಲಿ ಮಾಡಿದ ಒಂದು ಮಹತ್ತರ ಸಾಧನೆಯನ್ನು ಉಲ್ಲೇಖಿಸಲೇಬೇಕು. ಈ ಕಲಾಸಂಸ್ಥೆಯನ್ನು ಅಮೇರಿಕಾದ ಅರಿಜೋನ ರಾಜ್ಯದ ಅಧಿಕೃತ ಸಾಂಸ್ಕೃತಿಕ ಸಂಸ್ಥೆ ಎಂದು ಅಲ್ಲಿಯ ಸರಕಾರ ಪ್ರಮಾಣಪತ್ರದೊಂದಿಗೆ ಮಾನ್ಯತೆ ನೀಡಿದೆ. ಫೀನಿಕ್ಸ್ ನಗರದ ಶ್ರೀ ಪುತ್ತಿಗೆ ಮಠದಲ್ಲಿರುವ ಶ್ರೀ ಕಿರಣ್ ಭಟ್ ಅವರ ನೇತೃತ್ವದಲ್ಲಿ ಈ ಕಲಾ ಸಂಸ್ಥೆಯು ಅಮೇರಿಕಾದ ಅನೇಕ ರಾಜ್ಯಗಳಲ್ಲಿ ಸಂಚರಿಸಿ ಯಕ್ಷಗಾನ ಹಾಗೂ ಕನ್ನಡ ಕಲಿಯುವ ಆಸಕ್ತರಿಗೆ ತರಬೇತು ನೀಡಿ ಕಲಾಪ್ರಸಾರ ಮಾಡುವ ಉದ್ದೇಶದಿಂದ ಈಗಾಗಲೇ ಯೋಜನೆಯನ್ನು ರೂಪಿಸಲಾಗಿದೆ. ಅದಕ್ಕಾಗಿ ಯಕ್ಷಗಾನದ ವೇಷಭೂಷಣಗಳನ್ನು ಅಲ್ಲಿ ಇರಿಸಲಾಗಿದೆ.

ಪ್ರದರ್ಶನ ನಡೆದ ಪ್ರತಿ ಊರಿನಲ್ಲೂ, ಕಲಾವಿದರಿಂದ ಸವಿ ಸ್ಮರಣೆ ಅನುಭವಿಸಿದ ಅಲ್ಲಿಯ ಸಂಘಟಕರು ಕಲಾವಿದರನ್ನು ಉಪಚರಿಸಿದ ಪರಿ ಸದಾ ಸ್ಮರಣೀಯ. ಕಲಾವಿದರಿಗೆ ಮೌಖಿಕ ಪ್ರಶಂಸೆಯೊಂದಿಗೆ ಕೊಟ್ಟಕಾಣಿಕೆ ಹಾಗೂ ಉಡುಗೊರೆ, ಬೀಳ್ಕೊಡುವಾಗ ಅವರ ವರ್ತನೆಯಲ್ಲಿ ತೋರುತ್ತಿದ್ದ ಭಾರವಾದ ಹೃದಯ, ಕಣ್ಣಂಚಿನಲ್ಲಿ ಮಿಡಿಗೊಂಡ ಕಣ್ಣೀರು ಯಕ್ಷದೇವರ ಯಕ್ಷದಿಗ್ವಿಜಯದ ಯಶಸ್ಸಿನ ಇನ್ನೊಂದು ಮುಖ. 'ಇನ್ನೂ ಒಂದು ತಿಂಗಳು ಈ ದೇಶದಲ್ಲಿದ್ದು ಇತರ ಭಾಗದ ಕನ್ನಡಿಗರನ್ನು ಸಂತೃಪ್ತಿ ಪಡಿಸಿ' ಎಂಬ ಅವರ ಆಗ್ರಹದ ಆಹ್ವಾನವನ್ನು ಅವರ ಮನನೋಯದಂತೆ ತಿರಸ್ಕರಿಸಿದುದು ತಂಡದವರಿಗೆ ಅನಿವಾರ್ಯವಾಗಿತ್ತು. ಮೂರು ಕಡೆಗಳಲ್ಲಿ ಶ್ರೀಪುತ್ತಿಗೆ ಮಠದವರ ಉಪಚಾರವಂತೂ ಕಲಾವಿದರಿಗೆ ಋಣಭಾರವನ್ನು ಹೆಚ್ಚಿಸಿತು ಎಂದೇ ಹೇಳಬೇಕು.

ಆದರೆ ಯಕ್ಷಗಾನ ಪ್ರದರ್ಶನವನ್ನು ಇನ್ನೂ ಹೆಚ್ಚಿನಕಲಾತ್ಮಕ ಮೇಳಕ್ರಿಯೆಯಾಗಿ ರೂಪಿಸಿ, ತೆಂಕುತಿಟ್ಟಿನ ನೃತ್ಯಸೌಂದರ್ಯವನ್ನು ಇನ್ನೂ ಸುಂದರ ರೂಪಕ ಶೈಲಿಯಲ್ಲಿ, ಕೊರಿಯೋಗ್ರಾಫಿ ಕಲ್ಪನೆಯಲ್ಲಿ ಚಿತ್ರಿಸುವುದಕ್ಕೆ ಸಾಧ್ಯವಿತ್ತಲ್ಲವೆ ಎಂದೂ ಪ್ರಶ್ನಿಸಿದ ಕೆಲವು ಪ್ರೇಕ್ಷಕರಿದ್ದರು. (ಬಡಗುತಿಟ್ಟಿನ ಆಟವನ್ನು ನೋಡಿದ ಹಿನ್ನೆಲೆಯಲ್ಲಿ ಈ ಮಾತು ಮೂಡಿ ಬಂದಿರಬಹುದು) ಈ ಬಗೆಯ ಪ್ರಯತ್ನಗಳಿಗೆ ಕಲಾವಿದರಲ್ಲೂ ರಂಗತಾಲೀಮಿನ ಶಿಸ್ತಿನ ಎಚ್ಚರವೂ ಬೇಕೆಂದು ತೋರುತ್ತದೆ. ದೇವಾನಂದರ ಈ ಪ್ರಯತ್ನ ಇನ್ನೊ ವ್ಯವಸ್ಥಿತವಾಗಿ ಮುಂದುವರಿಯಲಿ ಹಾಗೂ ಇನ್ನಿತರ ಕಲಾತಂಡಗಳಿಗೂ ಅವಕಾಶದ ದಾರಿ ತೋರುವಂತಾಗಲಿ. ಆ ಮೂಲಕ ಯಕ್ಷಗಾನವು ಅಲ್ಲಿಯ ಕಲಾವಿಮರ್ಶಕ, ಕಲಾನಿರ್ದೇಶಕರ ಗಮನ ಸೆಳೆಯುವಂತಾಗ ಬೇಕಾದುದೂ ಮುಖ್ಯ. ಹೊರತು ಕೇವಲ ಸವಿಸ್ಮರಣೆಯೊಂದಿಗೆ ಇಂತಹ ಕಲಾಯಾನಗಳು ಕೊನೆಗೊಂಡರೆ, ಯಕ್ಷಕಲಾಮಾತೆಯ ಸೇವೆ ಅಪೂರ್ಣವೇ ಆದೀತು ಎಂಬುದು ನನ್ನೆಣಿಕೆ.

ಅಮೆರಿಕಾ ಖಂಡದಲ್ಲಿ ಮೊದಲಬಾರಿಗೆ ಬಯಲು ರಂಗಸ್ಥಳದಲ್ಲಿ "ಶ್ರೀ ದೇವಿ ಮಹಾತ್ಮ್ಯೆ" ಯಕ್ಷಗಾನ ಪ್ರದರ್ಶನ ನೀಡುತ್ತಾ 10 ರಾಷ್ಟ್ರಗಳನ್ನು ಸಂಚರಿಸಿ ಒಟ್ಟು 14 ಯಕ್ಷಗಾನ, ತಾಳಮದ್ದಳೆ, ಗಾನವೈಭವ, ಮಕ್ಕಳಿಗೆ ಮುಖವರ್ಣಿಕೆ, ಪ್ರಾತ್ಯಕ್ಷಿಕೆ ಹೀಗೆ ಯಶಸ್ವಿ ಕಾರ್ಯಕ್ರಮ ನೀಡಿ ಅಲ್ಲಿ ಎಲ್ಲರ ಮೆಚ್ಚುಗೆಗೆ ಪಾತ್ರವಾದ ಬೆಳುವಾಯಿಯ "ಶ್ರೀ ಯಕ್ಷದೇವ ಮಿತ್ರ ಕಲಾ ಮಂಡಳಿ" ಅಮೆರಿಕಾದ ಅರಿಜೋನಾ ರಾಜ್ಯದ ಅಧಿಕೃತ ಸಾಂಸ್ಕೃತಿಕ ಸಂಸ್ಥೆ ಎಂದು ಪ್ರಮಾಣ ಪತ್ರದೊಂದಿಗೆ ಮಾನ್ಯತೆ ಪಡೆದುಕೊಂಡಿದೆ. ಫೀನಿಕ್ಸ್ ನಗರದಲ್ಲಿರುವ ಮಾನ್ಯ ಶ್ರೀ ಕಿರಣ್ ಭಟ್ ಅವರ ನೇತೃತ್ವದಲ್ಲಿ ಸಂಸ್ಥೆಯು ಮುಂದಿನ ದಿನಗಳಲ್ಲಿ ಅನೇಕ ರಾಜ್ಯ ಸಂಚರಿಸಿ ಕನ್ನಡದ ಕಲಾ ಉತ್ಸಾಹಿ ಮಕ್ಕಳಿಗೆ ಯಕ್ಷಗಾನ ತರಬೇತಿ ನೀಡಿ ಉತ್ತಮ ಕಲಾಪ್ರಸರಣದ ಯೋಜನೆಯನ್ನು ಸಹ ರೂಪಿಸಲಾಗಿದೆ. ಅದಕ್ಕಾಗಿಯೇ ಬೇಕಾಗುವ ಯಕ್ಷಗಾನದ ಎಲ್ಲಾ ವೇಷಭೂಷಣಗಳನ್ನು ಈಗಾಗಲೇ ಅಲ್ಲೇ ಇರಿಸಲಾಗಿದೆ ಎಂದು ಶ್ರೀ ಯಕ್ಷದೇವ ಕಾರ್ಯಾಧ್ಯಕ್ಷ ಎಮ್. ದೇವಾನಂದ ಭಟ್ ತಿಳಿಸಿರುತ್ತಾರೆ.

॥ ಶ್ರೀ ಸೋಮನಾಥ ಪ್ರಸನ್ನಃ ॥

ತಾ. 18–03–2019

# ಶ್ರೀ ಸೋಮನಾಥ ದೇವಸ್ಥಾನ, ಚೆರುಗೋಳಿ

ಸದಾಶಿವ ಸಮಾರಂಭಾಂ ಶಂಕರಾಚಾರ್ಯಮಧ್ಯಮಾಯ್ ।
ಅಸ್ಮದಾಚಾರ್ಯಪರ್ಯಂತಾಂ ವಂದೇಗುರುಪರಂಪರಾಮ್ ॥

ಮಾನ್ಯರೇ,

ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯದಕ್ಷಿಣಾಮ್ನಾಯ ಶ್ರೀ ಶಾರದಾಪೀಠಾಧೀಶ್ವರ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಹಾಗೂ ತತ್ಕರಕಮಲಸಂಜಾತ ಶ್ರೀ ಶ್ರೀ ವಿಧುಶೇಖರಭಾರತೀ ಸ್ವಾಮಿಗಳವರ ಆಶೀರ್ವಾದಗಳೊಂದಿಗೆ

**ಸ್ವಸ್ತಿ । ಶ್ರೀ ಶಾಲಿವಾಹನ ಶಕ ೧೯೪೧ನೇ ವಿಕಾರಿ ನಾಮ ಸಂವತ್ಸರದ ಮೇಷ ಮಾಸ ೧೧ ದಿನಾಂಕ 25–04–2019ನೇ ಗುರುವಾರದಂದು**

**ಶ್ರೀ ಸೋಮನಾಥ ದೇವರ**

## ವಾರ್ಷಿಕ ಮಹೋತ್ಸವವು

ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಸಂಪನ್ನಗೊಳ್ಳಲಿರುವುದು. ಆ ಪ್ರಯುಕ್ತ ನೆರವೇರಲಿರುವ ಎಲ್ಲಾ ದೇವತಾಕಾರ್ಯಕ್ರಮಗಳಲ್ಲಿ ಭಕ್ತ ಮಹಾಜನರು ಭಾಗವಹಿಸಿ, ತನು ಮನ ಧನಗಳಿಂದ ಸಹಕರಿಸಿ, ಗಂಧಪ್ರಸಾದಗಳನ್ನು ಸ್ವೀಕರಿಸಿ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಡಾ| ರಮೇಶ ರಾವ್ ಚೆಂಡುಕಳ**
ಗೌರವಾಧ್ಯಕ್ಷರು

**ಶ್ರೀಧರ ಬಿ.**
ಅಧ್ಯಕ್ಷರು, ಸೇವಾ ಸಮಿತಿ

**ಕರುಣ್ ರಾವ್ ಬೆಳ್ಳೆ**
ಗೌರವ ಸಲಹೆಗಾರರು

**ಐಲ ಜಗದೀಶ ಶರ್ಮ**
ಅರ್ಚಕರು

**ಆಡಳಿತ ಸಮಿತಿ ಮತ್ತು**
ಸೇವಾ ಸಮಿತಿಯ ಸರ್ವಸದಸ್ಯರು

# ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8–00ರಿಂದ 12–00, ಸಂಜೆ 3–30ರಿಂದ 8–00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4–30ರಿಂದ

**ತಾ.22–04–2019 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10–00ರಿಂದ (ಸೇವಾ ಶುಲ್ಕ ರೂ.51/-)**

**ತಾ.24–04–2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5–00ರಿಂದ 6–00ರ ವರೆಗೆ)**

**ತಾ.24–04–2019 ಮತ್ತು ತಾ.09–05–2019 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9–00ರಿಂದ ಮಧ್ಯಾಹ್ನ 12–00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಮೇಷ ಮಾಸದ ವಿಶೇಷ ದಿನಗಳು

| | | | |
|---|---|---|---|
| 14–04–2019 | ಮೇಷ ಸಂಕ್ರಮಣ | 04–05–2019 | ಅಮಾವಾಸ್ಯೆ |
| 15–04–2019 | ಸೌರಯುಗಾದಿ, ಸ್ಮಾರ್ತೈಕಾದಶಿ | 05–05–2019 | ವಸಂತಋತು ವೈಶಾಖ ಮಾಸದ ಶುಕ್ಲಪಕ್ಷಾರಂಭ |
| 16–04–2019 | ಭಾಗವತ–ವೈಷ್ಣವೈಕಾದಶಿ | 07–05–2019 | ಅಕ್ಷಯ ತೃತೀಯಾ |
| 19–04–2019 | ಹುಣ್ಣಿಮೆ | 09–05–2019 | ಶಂಕರ ಜಯಂತಿ |
| 20–04–2019 | ವಿಕಾರಿ ಸಂವತ್ಸರದ ವಸಂತ ಋತು ಚೈತ್ರ ಮಾಸದ ಕೃಷ್ಣಪಕ್ಷಾರಂಭ | 15–05–2019 | ವೃಷಭ ಸಂಕ್ರಮಣ ಸರ್ವೈಕಾದಶಿ |
| 22–04–2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.36 | 18–05–2019 | ಹುಣ್ಣಿಮೆ |
| 30–04–2019 | ಸರ್ವೈಕಾದಶಿ | 19–05–2019 | ವಸಂತ ಋತು ವೈಶಾಖ ಮಾಸದ ಕೃಷ್ಣಪಕ್ಷಾರಂಭ |

ಭಕ್ತಿಗೀತೆ

## ತಪ್ಪುಗಳ ಮಾಡಿದೆನು

ತಪ್ಪುಗಳ ಮಾಡಿದೆನು......ಬಾಳಿನಲಿ ದುಡುಕಿದೆನು..........
ಒಪ್ಪುವೆನು ಮಾಡಿರುವ.........ತಪ್ಪು ಕೆಲಸಗಳನ್ನು ॥ಪಲ್ಲವಿ ॥
ಒಪ್ಪುವುದು ತಪ್ಪದೆನ್ನುವ ತಿಳಿದು ನೊಂದಿಹೆನು
ಕುಪ್ಪುಸ್ವಾಮಿಯೇ ಸಲಹೋ.......ಶರಣು ಬಂದಿಹೆನು ॥ಅನುಪಲ್ಲವಿ॥
ತಪ್ಪುಗಳ ಮಾಡಿದೆನು.
ಅಪರಾಧವೆಸಗಿದೆನು ಯೌವನದ ಮದದಲ್ಲಿ
ಜಪತಪಾದಿಗಳನ್ನು ಆಚರಿಸಲಿಲ್ಲ
ಉಪವಾಸ ವೃತ ನಿಯಮ ಎಂದೂ ಮಾಡದೆ ಹೋದೆ
ಅಪಮಾನ ಮಾಡಿದೆನು....ದೈವ ದೇವರನೂ ॥1॥
ತಪ್ಪುಗಳ ಮಾಡಿದೆನು......ಬಾಳಿನಲಿ ದುಡುಕಿದೆನು..........
ದೇಹವೇ ನಾನೆಂದು...ಭ್ರಮಿಸಿ ಬದುಕುತ ಬಂದೆ
ಮೋಹದಲಿ ಸಲಹಿದೆನು... ಮುದ್ದು ಮುಖವನ್ನು
ಊಹನೆಗು ಸಿಲುಕದೆ ಹಾಗೆ....ದೇಹಮುದಿಯಾಗುವುದು
ದ್ರೋಹ ಮಾಡುತ ಇಂದ್ರಿಯವೆಲ್ಲವೂ ॥2॥
ತಪ್ಪುಗಳ ಮಾಡಿದೆನು......ಬಾಳಿನಲಿ ದುಡುಕಿದೆನು..........
ಅಟ್ಟ ಅಡುಗೆಯನುಣದೆ....ಮುಗಿಯುವುದೆ ಜನುಮ ಋಣ
ಉಟ್ಟ ಉಡುಗೆಯಲೇನು...ಮುಗಿಯುವುದೆ ಪಯಣ
ಕೊಟ್ಟ ಕುಕ್ಕುಟಧರನು ಗಟ್ಟಿಗನು ತಾನಿರಲು
ದಿಟ್ಟತನದಲಿ ಭಜಿಸು....ಮುಕುತಿ ನೀಡುವನು ॥3॥
ತಪ್ಪುಗಳ ಮಾಡಿದೆನು......ಬಾಳಿನಲಿ ದುಡುಕಿದೆನು..........
ಜಗದೊಡೆಯ ಶಂಕರನು.... ಮಗನನ್ನೆ ಕಳಿಸಿಹನು
ದಿಗಿಲುಗೊಳ್ಳುವೆಯೇಕೆ? ಷಣ್ಮುಖ ನಾಥನು
ಬಗೆ ಬಗೆಯ ಪಾಪ ತಾಪಗಳನ್ನು ಪರಿಹರಿಸಿ
ಮಿಗಿಲಾಗಿ ಪೊರೆಯುವನು... ತನ್ನ ಭಕುತರನು ॥4॥
ತಪ್ಪುಗಳ ಮಾಡಿದೆನು......ಬಾಳಿನಲಿ ದುಡುಕಿದೆನು..........
ಒಪ್ಪುವೆನು ಮಾಡಿರುವ.........ತಪ್ಪು ಕೆಲಸಗಳನ್ನು
ಒಪ್ಪುವುದು ತಪ್ಪದೆನ್ನುವ ತಿಳಿದು ನೊಂದಿಹೆನು
ಕುಪ್ಪುಸ್ವಾಮಿಯೇ ಸಲಹೋ.......ಶರಣು ಬಂದಿಹೆನು
ಶ್ರೀ ಶ್ರೀ ಶ್ರೀ ಸುಬ್ರಹ್ಮಣ್ಯೇಶ್ವರ

**–ಅಪಯಶ, ಬೆಂಗಳೂರು. 9741495478**

**ಕವನಗಳು**

–ಮಲ್ಲಿಕ್ ಉಳಿಯಾರು.

### ವಾಸ್ತವ

ಕೆಲವು ಸಂಗತಿಗಳು ಜೀವನದಲ್ಲಿ ಸಿಗುವುದಿಲ್ಲ
ನಾವು ಅಂದುಕೊಂಡ ರೀತಿಯಲ್ಲಿ ಬದುಕು ಸಾಗುವುದಿಲ್ಲ
ಸಣ್ಣ ಸಣ್ಣ ವಿಷಯ ಸಂಗತಿಗಳಲ್ಲಿ ಖುಷಿ ಕಾಣಬೇಕು
ಏನಿದೆಯೋ ಅದರಲ್ಲಿ ಸಂತಸ ನೆಮ್ಮದಿ ಕಂಡುಕೊಳ್ಳಬೇಕು
ಇದುವೇ ಮನುಷ ಜೀವನದ ಕಠಿಣ ವಾಸ್ತವ

### ಪರಿಪೂರ್ಣತೆ

ಯಾವುದೂ ಪರಿಪೂರ್ಣವಲ್ಲ ಯಾರೂ ಪರಿಪೂರ್ಣರಲ್ಲ
ಪರಿಪೂರ್ಣತೆ ವ್ಯಕ್ತಿಗಳಲ್ಲಿ ಇಲ್ಲ
ಜೀವನದಲ್ಲೂ ಇಲ್ಲ ನಿಸರ್ಗದಲ್ಲೂ ಇಲ್ಲ
ಅಸಲಿಗೆ ಪರಿಪೂರ್ಣತೆ ಎಂಬುದು
ಅಮೂರ್ತ ಪರಿಕಲ್ಪನೆ.

## ಕಾಂತಮಂಗಲದಲ್ಲಿ ಪ್ರತಿಷ್ಠಾ ಮಹೋತ್ಸವ

ಕಾಂತಮಂಗಲ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ತಾ.18-02-2019ರಂದು ಆಡಳಿತ ಮೊಕ್ತೇಸರರಾದ ಬಯಂಬು ಶಿವರಾವ್ ಇವರ ನೇತೃತ್ವದಲ್ಲಿ ಹಾಗೂ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನಿರ್ದೇಶನದಲ್ಲಿ ಪ್ರತಿಷ್ಠಾ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು.

## ಕೂಡಬೆಟ್ಟು ದೇವಸ್ಥಾನದಲ್ಲಿ ಉತ್ಸವ

ಕೂಡಬೆಟ್ಟು ಶ್ರೀ ಸದಾಶಿವ ದೇವಸ್ಥಾನದಲ್ಲಿ ತಾ.04-03-2019ರಂದು ಶಿವರಾತ್ರಿ ಉತ್ಸವವು ಹಾಗೂ ತಾ.26-03-2019ರಂದು ಪ್ರತಿಷ್ಠಾ ಮಹೋತ್ಸವವು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನಿರ್ದೇಶನದಲ್ಲಿ ಹಾಗೂ ಬಿ.ಕೆ.ಧನಂಜಯಕುಮಾರ್ ಇವರ ಉಸ್ತುವಾರಿಯಲ್ಲಿ ವಿಜೃಂಭಣೆಯಿಂದ ನೆರವೇರಿತು.

## ಪುಣ್ಯ ಕ್ಷೇತ್ರಗಳಲ್ಲಿ ಕಿಸೆಗಳ್ಳರ ಕೈವಾಡ !

**(ನೆನಪಿನಂಗಳದಿಂದ)** **ಲೇಖಕ : ಜಿ.ಕೆ. ಕೋಲ್ಪೆ**

ಕೆಲವು ವರ್ಷಗಳ ಹಿಂದೆ ತಿರುಪತಿ 'ಪದ್ಮಾವತಿ' ದೇವಸ್ಥಾನಕ್ಕೆ ಬಂಧು-ಬಳಗದೊಂದಿಗೆ ಪ್ರವಾಸ ಹೋದವ ವಾಹನದಿಂದ ಕೆಳಗಿಳಿಯುತ್ತಾ ಹೆಗಲಮೇಲೊಂದು 'ರೆಕ್ಷಿನ್ ಬ್ಯಾಗ್' ನ್ನು ಏರಿಸಿ ಅದರೊಳಗೆ ಹಣದ ಪರ್ಸನ್ನು ಭದ್ರಗೊಳಿಸುತ್ತಿದ್ದೆ.

ಬಹುಶಃ ಪಕ್ಕದಲ್ಲಿದ್ದ ಕೆಲವು ಕಿಸೆಗಳ್ಳರು ಅದನ್ನು ನೋಡಿರಬಹುದು. ದೇವಸ್ಥಾನದಲ್ಲಿ ಸರದಿ ಸಾಲಿನ ನೂಕುನಗ್ಗಲಿನಲ್ಲಿ ಸಾರ್, ನೀವು ಹಿರಿಯರು 'ಮುಂದೆ ನಡೆಯಿರಿ' ಎಂದು ಹೇಳುತ್ತಾ, ಮಹಾದ್ವಾರದ ಹತ್ತಿರ ಹಿಂದಿನಿಂದ ದೂಡಲು ಶುರುಮಾಡಿದರು. ಅಂತೂ ದೇವರ ಎದುರು ತಲುಪಿ ಪೂಜಾರಿಯು ತಟ್ಟೆಗೆ ಕಿಸೆಯಲ್ಲಿದ್ದ ಕಾಣಿಕೆ ಹಾಕಿ ಕಷ್ಟಪಟ್ಟು ಹೊರಬಂದು ಚೀಲಮುಟ್ಟಿ ನೋಡಿದಾಗ, ಅದಕ್ಕೆ ಬ್ಲೇಡ್ ಹಾಕಿ ಹಣದ ಪರ್ಸ್ ಎಗರಾಯಿಸಿದ್ದು ಗೊತ್ತಾಯ್ತು. ಆ ಹುಡುಗರೂ ನಾಪತ್ತೆಯಾಗಿದ್ದರು. ನನ್ನ ತಮ್ಮನ ಪರ್ಸ್ ಕೂಡಾ ಇದೇ ರೀತಿ ಕಾಣೆಯಾಗಿತ್ತು. ಅಂತೂ, ಹೆಚ್ಚಿನ ಹಣ ವಾಹನದಲ್ಲಿ ಬಿಟ್ಟುಹೋದ ಕಾರಣ ಮುಂದಿನ ಎಚ್ಚರಿಕೆಯ ಪ್ರಯಾಣ ಊರಿಗೆ ತಲುಪಿ ಅಂತ್ಯಗೊಂಡಿತು. ಇಂತಹ ಅನುಭವಗಳು ಸಾಕಷ್ಟು ಮಂದಿಗೆ ಆಗಿರಬಹುದು. ಇತ್ತೀಚಿನ ದಿನಗಳಲ್ಲಿ ಪ್ರತಿ ಕ್ಷೇತ್ರದಲ್ಲೂ, ಸಭೆಸಮಾರಂಭಗಳಲ್ಲೂ ಧ್ವನಿವರ್ಧಕದಲ್ಲಿ ಕಿಸೆಗಳ್ಳರ ಬಗ್ಗೆ 'ಎಚ್ಚರಿಕೆ' ಸಂದೇಶ ಪ್ರಸಾರವಾಗುತ್ತಾ ಇರುತ್ತದೆ. ಆದರೂ, ಅಜಾಗ್ರತೆಯಿಂದ ಮೋಸ ಹೋಗುವವರು ಇರುವಷ್ಟು ದಿನ ಮೋಸಗಾರರೂ ಇರುತ್ತಾರೆ. ಬಲುಜೋಕೆ.

## ನಿಧನ



### ಶ್ರೀಮತಿ ಸುಮತಿರಾವ್

ಉದ್ಯಾವರದ ನಿವಾಸಿ ದಿವಂಗತ ಗೋಪಾಲರಾಯರ ಪತ್ನಿ ಶ್ರೀಮತಿ ಸುಮತಿರಾವ್ ಇವರು ತಾ 25-03-2019 ರಂದು ನಿಧನ ಹೊಂದಿದರು

★★★★ ★★★★

### ಶ್ರೀಮತಿ ಶ್ರೀಲಕ್ಷ್ಮೀ

ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾದೇವಸ್ಥಾನದ ಅರ್ಚಕರಾದ ಶ್ರೀ ಧರಣೀಶ ಭಟ್‌ರ ಧರ್ಮಪತ್ನಿ ಶ್ರೀಮತಿ ಶ್ರೀಲಕ್ಷ್ಮೀ ಇವರು ತಾ31-03-2019ರಂದು ನಿಧನಹೊಂದಿದರು

★★★★ ★★★★



### ಶ್ರೀಮತಿ ಶೋಭಾ

ಉಡುಪಿ ಕುಕ್ಕಿಕಟ್ಟೆಯ ಶ್ರೀ ರಾಧಾಕೃಷ್ಣ ರಾವ್‌ರವರ ಪತ್ನಿ ಶ್ರೀಮತಿ ಶೋಭಾ ಇವರು ತಾ.12-03-2019ರಂದು ನಿಧನಹೊಂದಿದರು. ಇವರು ಕಲಾಪೋಷಕರಾದ ಭ್ರಮರ ಖ್ಯಾತಿಯ ಶ್ರೀ ಸುರೇಶ್‌ರಾಯರ ತಾಯಿ.


## ಶುಭ ವಿವಾಹ

ಆಳುಗ್ಗೆಲು ಶ್ರೀಮತಿ ಶಾಲಿನಿ ಮತ್ತು ಶ್ರೀ ರಾಮಚಂದ್ರ ರಾವ್ ಇವರ ಪುತ್ರ ರಜತ್ ಮತ್ತು ಮೈಸೂರಿನ ಶ್ರೀಮತಿ ಸಂಧ್ಯಾ ಮತ್ತು ಶ್ರೀ ಉಮೇಶ್ ರಾವ್ ಇವರ ಪುತ್ರಿ ಸುಚೇತಾ ಇವರ ವಿವಾಹವು ತಾ.10-03-2019ನೇ ರವಿವಾರ ಹಿರಿಯಡ್ಕ ಶ್ರೀ ಗಣೇಶ ಕಲಾಮಂದಿರದಲ್ಲಿ ನೆರವೇರಿತು.


ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು




ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

SAMPATH KUMAR Mobile : 9741508881
TRISHULINI TOURIST
The Tourist People
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ
ಶ್ರೀ ಭಾರತೀ ಮಂಟಪ, ಉಡುಪಿ ಜಿಲ್ಲೆ, ಉದಯಾದ್ರಿ
ನಮ್ಮಲ್ಲಿ ಎಲ್ಲಾ ಶುಭ ಸಮಾರಂಭಗಳು, ಹೋಮ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. – ಆಡಳಿತ ಮಂಡಳಿ

ಶ್ರೀ ಉದಯಾದ್ರಿ ಮಠ, ಪಡುಬಿದ್ರಿ, ಉಡುಪಿ ಜಿಲ್ಲೆ
ನಮ್ಮಲ್ಲಿ ಔರ್ಧ್ವಕ್ರಿಯೆ, ಶ್ರಾದ್ಧ ಇತ್ಯಾದಿ ಕಾರ್ಯಕ್ರಮ ನಡೆಸುವರೇ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
ಸಂಪರ್ಕಿಸಿರಿ : ನಯನಾಭಿರಾಮ ಸ್ವಾಮಿ : 9449101303, ಶ್ರೀನಿವಾಸ ಶರ್ಮ : 9945933363

## ಶ್ರೀ. ಮ.ನಾ.ಹೆಬ್ಬಾರರಿಗೆ ಹುಟ್ಟಿದೂರಿನ ಸಮ್ಮಾನ



ಶ್ರೀ ಮ.ನಾ.ಹೆಬ್ಬಾರರು ಭಾಮಿನೀ ಷಟ್ಪದಿಯಲ್ಲಿ ಖಂಡಕಾವ್ಯವೊಂದನ್ನು ಬರೆದ ಬಗ್ಗೆ ಅವರ ಹುಟ್ಟಿದ ಊರಾದ ಕಬ್ಬಿನಾಲೆಯ ಶ್ರೀ ಲಕ್ಷ್ಮೀನಾರಾಯಣ ದೇವಳದ ಸಭಾಭವನದಲ್ಲಿ, ಕಬ್ಬಿನಾಲೆ ಶ್ರೀ ಕೆ. ಸೀತಾರಾಮ ಹೆಬ್ಬಾರರು ತಮ್ಮ ಮೊಮ್ಮಗ (ಮಗಳಮಗ)ನ ನಾಮಕರಣದ ಶುಭಾವಸರದಲ್ಲಿ ತನ್ನ ವೈಯಕ್ತಿಕ ನೆಲೆಯಲ್ಲಿ ಶ್ರೀ ಮ.ನಾ.ಹೆಬ್ಬಾರರನ್ನು ಫಲಪುಷ್ಪ, ಸ್ಮರಣಿಕೆ, ಅಭಿನಂದನಾ ಪತ್ರಗಳನಿತ್ತು ಸನ್ಮಾನಿಸಿದರು. ಆರಂಭದಲ್ಲಿ ಶ್ರೀ ಕೆ. ಸೀತಾರಾಮ ಹೆಬ್ಬಾರರು ಸ್ವಾಗತಿಸಿದರು. ಶ್ರೀ ಕಾಪೋಳಿ ಶ್ರೀಧರ ಹೆಬ್ಬಾರರು ಅಭಿನಂದನಾ ಮಾತುಗಳನ್ನಾಡಿದರು. ಶಿಕ್ಷಕಿ ಶ್ರೀಮತಿ ಕವಿತಾರವರು ಅಭಿನಂದನಾ ಪತ್ರ ವಾಚಿಸಿದರು. ಶ್ರೀ ಕೆ. ರಾಮಕೃಷ್ಣ ಹೆಬ್ಬಾರ್, ಶ್ರೀ ಮೋಹನ್ ಹೆಬ್ಬಾರ್.ಕೆ ಮತ್ತಿತರರು ಉಪಸ್ಥಿತರಿದ್ದರು. ಶ್ರೀ ಮ.ನಾ.ಹೆಬ್ಬಾರರು ತನಗಿತ್ತ ಸಮ್ಮಾನಕ್ಕೆ ಕೃತಜ್ಞತೆಗಳನ್ನರ್ಪಿಸಿದರು.

## ಶ್ರೀಮತಿ ಡಾ। ಶೋಭಿತಾ ಸತೀಶ್‌ರವರ ಸಂಗೀತ ಕಾರ್ಯಕ್ರಮ




ಕಾಸರಗೋಡಿನ ಇತಿಹಾಸ ಪ್ರಸಿದ್ಧ ಶ್ರೀ ಮಲ್ಲಿಕಾರ್ಜುನ ಕ್ಷೇತ್ರದಲ್ಲಿ ನಡೆದ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶ ಮಹೋತ್ಸವದ ಸಂದರ್ಭದಲ್ಲಿ ಪುತ್ತೂರಿನ ಶ್ರೀಮತಿ ಡಾ. ಶೋಭಿತಾ ಸತೀಶ್ ಇವರು ಭಕ್ತಿಗಾನ ಹಾಗೂ ಸುಗಮಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ವಿದುಷಿ ಶ್ರೀಮತಿ ರಾಧಾಮುರಳೀಧರ್‌ರವರ ಸಂಗೀತ ಕಾರ್ಯಕ್ರಮ



ವಿದುಷಿ ಶ್ರೀಮತಿ ರಾಧಾಮುರಳೀಧರ್ ಕಾಸರಗೋಡು ಇವರು ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಕಾಸರಗೋಡು ಇದರ ಬ್ರಹ್ಮಕಲಶ ಮಹೋತ್ಸವದ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ವನ್ನು ಪ್ರಸ್ತುತ ಪಡಿಸಿದರು. ಇವರಿಗೆ ವಯಲಿನ್ನಲ್ಲಿ ಶ್ರೀ ಪ್ರಭಾಕರ ಕುಂಜಾರು ಹಾಗೂ ಮೃದಂಗದಲ್ಲಿ ಶ್ರೀ ಪುರುಷೋತ್ತಮ ಪುಣಿಚಿತ್ತಾಯರು ಸಹಕಾರ ನೀಡಿದರು.

## ಕದ್ರಿ ನೃತ್ಯ ವಿದ್ಯಾಲಯದಲ್ಲಿ ರಂಗಪ್ರವೇಶೋತ್ಸವ



84 ವರುಷಗಳ ಹಿಂದೆ ಕೀರ್ತಿಶೇಷ ಶ್ರೀ.ಯು.ಎನ್.ಕೃಷ್ಣರಾಯರಿಂದ ಸ್ಥಾಪಿಸಲ್ಪಟ್ಟ ಮಹಾನಗರದ ಪ್ರತಿಷ್ಠಿತ ನೃತ್ಯ ಸಂಸ್ಥೆಯಾದ ಕದ್ರಿ ನೃತ್ಯ ವಿದ್ಯಾನಿಲಯ ಚಾರಿಟೇಬಲ್ ಟ್ರಸ್ಟ್ ಇದರ ನಿರ್ದೇಶಕರಾದ "ನಾಟ್ಯ ವಿಶಾರದ", ಗುರುಕುಲ ಭೂಷಣ ವಿದ್ವಾನ್ ಯು.ಕೆ. ಪ್ರವೀಣರ ಶಿಷ್ಯೆಯರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವು ತಾ:16.02.2019ರಂದು ಸಂಜೆ 5.00 ಗಂಟೆಗೆ ಕೊಡಿಯಾಲ್ ಬೈಲಿನಲ್ಲಿರುವ ಟಿ.ವಿ.ರಮಣ್ ಪೈ ಕನ್‌ವೆನ್‌ಷನ್ ಸೆಂಟರ್‌ನಲ್ಲಿ ಯಶಸ್ವಿಯಾಗಿ ನೆರವೇರಿತು. ಈ ಕಾರ್ಯಕ್ರಮಕ್ಕೆ ಗಣ್ಯರಾದ ಶ್ರೀ ಮಂಜುನಾಥ ಭಂಡಾರಿ, ಶ್ರೀ ರಾಮನಾಥ್ ಪ್ರಸಾದ್, ಶ್ರೀ ವೈ.ಎಂ.ಕರುಂಬಯ್ಯ ಆಗಮಿಸಿದ್ದರು. ಕಾರ್ಯಕ್ರಮಕ್ಕೆ ನಟುವಾಂಗದಲ್ಲಿ ವಿದ್ವಾನ್ ಯು.ಕೆ.ಪ್ರವೀಣ್, ಹಾಡುಗಾರಿಕೆಯಲ್ಲಿ ವಿದುಷಿ ಉಷಾ ಪ್ರವೀಣ್ ಮತ್ತಿತರರು ಸಹಕರಿಸಿದರು.

## 'ಸ್ಪಂದನ': ವಿಶೇಷ ಚೇತನ ಯುವಕರ ವಸತಿ ನಿಲಯಕ್ಕೆ ಜೀನಸು ಸಾಮಾಗ್ರಿ/ಧಾನ್ಯಗಳ ಕೊಡುಗೆ




ಉಡುಪಿಯ ಬಿ ಜಯರಾಮ್ ರಾಯರು ಉಪ್ಪೂರಿನ 'ಸ್ಪಂದನ' ವಿಶೇಷ ಚೇತನ ಯುವಕರ ವಸತಿ ನಿಲಯಕ್ಕೆ ಮಾರ್ಚ್ 29ರಂದು ಭೇಟಿ ನೀಡಿ ಪ್ರತಿ ವರ್ಷದಂತೆ ತಮ್ಮ ಹುಟ್ಟು ಹಬ್ಬವನ್ನು ಅಲ್ಲಿ ಆಚರಿಸಿದರು. ಮಾತ್ರವಲ್ಲದೆ ನಿಲಯ ನಿವಾಸಿಗಳಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆ ಮಾಡಿ, ಸುಮಾರು ರೂ.25,000/– ಮೌಲ್ಯದ ತಿಂಗಳ ಪೂರ್ತಿ ಜೀನಸು ಸಾಮಾಗ್ರಿ/ದಿನೋಪಯೋಗಿ ವಸ್ತುಗಳನ್ನು ಕೊಡುಗೆಯಾಗಿ ನೀಡಿದರು. ಜಯಂಟ್ಸ್ ಗ್ರೂಪ್ ಬ್ರಹ್ಮಾವರ ಮತ್ತು ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದವರು ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಶ್ರೀ ಜಯರಾಮ ರಾವ್ ದಂಪತಿಗಳು ದೀಪ ಬೆಳಗಿಸಿ, ಉದ್ಘಾಟಿಸಿ, ಜನ್ಮದಿನದ ಕೇಕ್ ಕತ್ತರಿಸಿ ಹಂಚಿದರು. ಅತಿಥಿಗಳ ಉಪಸ್ಥಿತಿಯಲ್ಲಿ ಜೀನಸು ಸಾಮಾಗ್ರಿಗಳನ್ನು ವಿಶೇಷ ಚೇತನ ಯುವಕರಿಗೆ ಸಾಂಕೇತಿಕವಾಗಿ ಹಸ್ತಾಂತರಿಸಿದರು.

ಜಯರಾಮ ರಾಯರಿಗೆ ಶುಭಾಶಯ ಸಲ್ಲಿಸಿ ಮಾತನಾಡಿದ ಉಡುಪಿ ಜಯಂಟ್ಸ್‌ನ ಸ್ಥಾಪಕಾಧ್ಯಕ್ಷ ವೇಣುಗೋಪಾಲ ರಾವ್ ಈ ವಸತಿ ನಿಲಯದಲ್ಲೇ ಜನ್ಮದಿನ ಆಚರಿಸುವ ಸಂಕಲ್ಪ ಮಾಡಿರುವ ಜಯರಾಮರಾಯರು ಈ ನೆವದಿಂದ ಈ ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ. ಈ ಆಶಯ ಒಂದು ಆದರ್ಶವಾಗಿ ಬೆಳೆದು ಬಂದರೆ ಅಸಹಾಯಕರನ್ನು ಆದರಿಸುವ ಹೃದಯವಂತರಿಗೆ ಸ್ಫೂರ್ತಿಯಾಗುತ್ತದೆ ಎಂದರು. ತನ್ನ ಚಟುವಟಿಕೆಗಳ ಮೂಲಕ ಊರಿನ ಮನೆಮಾತಾಗಿರುವ ಬ್ರಹ್ಮಾವರ ಜಯಂಟ್ಸ್ ಮತ್ತು ಸ್ಥಾನಿಕ ಬ್ರಾಹ್ಮಣ ಸಂಘದ ಪದಾಧಿಕಾರಿಗಳನ್ನು ಅಭಿನಂದಿಸಿದ ಅವರು ಸ್ಪಂದನದಂತ ಹೆಚ್ಚಿನ ಸಂಸ್ಥೆಗಳಿಗೆ ನೆರವು ನೀಡುವ ಕೆಲಸವಾಗಲಿ ಎಂದು ಹಾರೈಸಿದರು. ಜಯಂಟ್ಸ್ ಫೆಡರೇಶನ್ ಪೂರ್ವಾಧ್ಯಕ್ಷ ಶ್ರೀ ಮಧ್ವಸೂದನ ಹೇರೂರು, ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಮಂಜುನಾಥ ಹೆಬ್ಬಾರ್ ಮಾತನಾಡಿ ಜಯರಾಮ ರಾಯರ ಆಶಯವನ್ನು ಶ್ಲಾಘಿಸಿ ಅವರಿಗೆ ದೇವರು ಅನುಗ್ರಹಿಸಲಿ ಎಂದರು.

ಬ್ರಹ್ಮಾವರ ಜಯಂಟ್ಸ್ ಅಧ್ಯಕ್ಷ ಶ್ರೀ ಸುಂದರ ಪೂಜಾರಿಯವರು ವಂದನೆ ಸಲ್ಲಿಸಿದರು. ಜಯಂಟ್ಸ್ ಪೂರ್ವಾಧ್ಯಕ್ಷ ಹಾಗೂ 'ಸ್ಪಂದನ'ದ ಟ್ರಸ್ಟಿಗಳಲ್ಲೊಬ್ಬರಾದ ವಿವೇಕ್ ಕಾಮತ್ ಕಾರ್ಯಕ್ರಮ ನಿರ್ವಹಿಸಿ ಸ್ವಾಗತಿಸಿದರು. 'ಸ್ಪಂದನ'ದ ವ್ಯವಸ್ಥಾಪಕರಾದ ಶ್ರೀ ಉಮೇಶ್, ಜನಾರ್ದನ ಸಹಕರಿಸಿದರು. ಸ್ಥಾನಿಕ ಬ್ರಾಹ್ಮಣ ಸಂಘದ ಕಾರ್ಯದರ್ಶಿ ಯು.ಅರವಿಂದ ಕುಮಾರ್ ಮತ್ತು ಬ್ರಹ್ಮಾವರ ಜಯಂಟ್ಸ್ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ರ್‍ಯಾಂಕ್ ವಿಜೇತೆಗೆ ಅಭಿನಂದನೆ



ಮಂಗಳೂರು ವಿಶ್ವವಿದ್ಯಾನಿಲಯ 2018–19ನೇ ಸಾಲಿನಲ್ಲಿ ನಡೆಸಿದ ಎಂಎಸ್ಸಿ ಕಂಪ್ಯೂಟರ್ ಸೈನ್ಸ್ ಸ್ನಾತಕೋತ್ತರ ಪರೀಕ್ಷೆಯಲ್ಲಿ ಉಡುಪಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿನಿ ಅಕ್ಷತಾ ಒಂದನೇ ರ್‍ಯಾಂಕ್‌ಗಳಿಸಿದ್ದಾರೆ. ಇವಳು ಪಡುಬಿದ್ರಿಯ ಬ್ರಹ್ಮಶ್ರೀ ಶಿವಪ್ರಸಾದ ಭಟ್ ಹಾಗೂ ಗೀತಾ ದಂಪತಿಗಳ ಪುತ್ರಿ.

**ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011–12ರಿಂದ 2016–17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

# ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ 'ಸ್ಪಂದನ' ಅನಾಥಾಶ್ರಮದಲ್ಲಿ ಶ್ರದ್ಧಾಂಜಲಿ

ವರದಿ : ಕೆ.ವೇಣುಗೋಪಾಲ್ ರಾವ್



ಕರ್ವಾಲು ಶಂಕರನಾರಾಯಣ ರಾಯರು ತಮ್ಮ ಬಂಧು-ಮಿತ್ರರೊಡಗೂಡಿ ಇತ್ತೀಚೆಗೆ ಉಗ್ರವಾದಿಗಳ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಹುತಾತ್ಮರಾದ 44 ಮಂದಿ ಭಾರತೀಯ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಮಾರ್ಚ್ ತಿಂಗಳ 15ನೇ ತಾರೀಕಿನಂದು ಉಡುಪಿ-ಉಪ್ಪೂರು ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಬಳಿಯಿರುವ ಮಾನಸಿಕ ವಿಶೇಷ ಚೇತನ ಯುವಕರ ವಸತಿ ಶಾಲೆಯಲ್ಲಿ 'ಸ್ಪಂದನ'ದಲ್ಲಿ ಆಶ್ರಯ ಪಡೆಯುತ್ತಿರುವ ಯುವಕರಿಗೆ ಏರ್ಪಡಿಸಿದ ಅನ್ನದಾನ ಕಾರ್ಯಕ್ರಮದ ಸಂದರ್ಭದಲ್ಲಿ ಈ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಶ್ರೀಯುತರ ಜತೆಗೆ ಅವರ ಪುತ್ರ ಕರ್ವಾಲು ಸುದರ್ಶನ ರಾವ್, ಶ್ರೀಗಳಾದ ಕರ್ವಾಲು ವೇಣುಗೋಪಾಲರಾವ್, ಉಪ್ಪೂರು ಗೋಪಾಲಕೃಷ್ಣರಾವ್, ಕೃಷ್ಣಮೂರ್ತಿ ರಾವ್, ಇನ್ನ ಶ್ರೀನಿವಾಸ ರಾವ್, ಸೋದರಿಯರಾದ ಶ್ರೀಮತಿ ಸುಶೀಲಾ ಸುಬ್ಬರಾವ್, ಶ್ರೀಮತಿ ಪುಷ್ಪಾವತಿ ರಾವ್, ಶ್ರೀಮತಿ ಧಾರಿಣಿದೇವಿ ಮೊದಲಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ನಿಲಯ ನಿವಾಸಿಗಳೊಂದಿಗೆ ಬೆರೆತು ಅಲ್ಲಿನ ಅವರ ಜೀವನ ವಿಧಾನದ ಬಗ್ಗೆ ವಿಚಾರಿಸಿದರು.

ಸ್ಪಂದನ ವಸತಿ ನಿಲಯದ ಕಾರ್ಯಕರ್ತರಾದ ಶ್ರೀಯುತ ಉಮೇಶ್ ಹಾಗೂ ಜನಾರ್ಧನ್‌ರವರು ಮಾತನಾಡಿ, ಭಾರತೀಯ ಯೋಧರು ನಮ್ಮ ದೇಶದ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಹೋರಾಡುತ್ತಾರೆ. ಹೋರಾಡುತ್ತಾ ಹುತಾತ್ಮರಾಗುತ್ತಾರೆ. ಅವರಿಗೆ ಮತ್ತು ಅವರ ಕುಟುಂಬಕ್ಕೆ ನಾವು ಚಿರಋಣಿಗಳಾಗಿರಬೇಕು, ಈ ಸಂದರ್ಭದಲ್ಲಿ, ದೇಶದ ರಕ್ಷಣೆಯಲ್ಲಿ ಹುತಾತ್ಮರಾದವರಿಗೆ ನಮನ ಸಲ್ಲಿಸುವ ಅವಕಾಶವನ್ನು ಶ್ರೀಯುತ ಶಂಕರ ನಾರಾಯಣರಾಯರು ಕಲ್ಪಿಸಿದ್ದಾರೆ. ಅವರಿಗೆ ಧನ್ಯವಾದಗಳು ಎಂದರು. ಸ್ಪಂದನದ ಯುವಕರು ದೇಶಭಕ್ತಿಗೀತೆಗಳನ್ನು ಹಾಡಿ ತಮ್ಮದೇ ಆದ ರೀತಿಯಲ್ಲಿ ಯೋಧರಿಗೆ ಗೌರವ ಅರ್ಪಿಸಿದರು. ಶಂಕರನಾರಾಯಣ ರಾಯರು ಮಾತಾಡಿ "ದೇಶಕ್ಕಾಗಿ ಗಡಿಯಲ್ಲಿ ಯೋಧರು ಅಮೂಲ್ಯವಾದ ಸೇವೆ ಸಲ್ಲಿಸುವಂತೆ ಇಲ್ಲಿ ಮಾನಸಿಕ ವಿಶೇಷ ಚೇತನ ಯುವಕರಿಗೆ ವ್ಯವಸ್ಥಿತವಾಗಿ ಅಮೋಘವಾದ ರೀತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸ್ಪಂದನದ ವ್ಯವಸ್ಥಾಪಕರು ಮತ್ತು ಕಾರ್ಯಕರ್ತರ ಸೇವೆ ಮಾತಿಗೆ ಮೀರಿದ್ದು, ಅವರ ಬಾಳು ಸಾರ್ಥಕ ಎನ್ನುತ್ತಾ ಇಲ್ಲಿ ಅಪರೂಪದ ಸಮಯವನ್ನು ಕಳೆಯಲು ಅವಕಾಶ ಮಾಡಿಕೊಟ್ಟ ಎಲ್ಲರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು.




ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಭಜನಾ ಮಂಡಳಿಯ ಸದಸ್ಯೆಯರು ನವೀಕರಣಗೊಳ್ಳುತ್ತಿರುವ ಶ್ರೀ ಬಾಳೆಕುದ್ರು ಮಠ, ಜೀರ್ಣೋದ್ಧಾರಗೊಂಡ ಶ್ರೀ ಪೊಳಲಿ ರಾಜರಾಜೇಶ್ವರಿ ದೇವಸ್ಥಾನ ಹಾಗೂ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಕಳೆದ ತಿಂಗಳಲ್ಲಿ ಭಜನಾ ಕಾರ್ಯಕ್ರಮವನ್ನು ನೆರವೇರಿಸಿದರು.

With Best Compliments From :




With Best Compliments From :




Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org